ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರೇ, ನಮ್ಮ ಪ್ರತಿಪಕ್ಷದ ಎಲ್ಲ ಮುಖಂಡರೂ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳಿಸಿಕೊಟ್ಟಿದ್ದೇನೆ. ಪ್ರಾರಂಭದ ದಿವಸದಲ್ಲಿ ಬಹುಶಃ ರೈತರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದು ಇರದಿದ್ದರೆ ಭೂಹಗರಣ ಭೂ ಮಾಫಿಯ ಬಗೆಗಿನ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಬೇಕೆಂದು ನಾನು, ವಾಟಾಳ್ ನಾಗರಾಜ್, ಮಾಧುಸ್ವಾಮಿ, ಶ್ರೀರಾಮರೆಡ್ಡಿ ಒಕ್ಕೊರಲಿನಿಂದ ಅವತ್ತು ಚರ್ಚೆ ಮಾಡಿದ್ದು, ಇವತ್ತೂ ಜಯಪ್ರಕಾಶ್ ಹೆಗ್ಗಡೆ ಸೇರಿದಂತೆ ಎಲ್ಲರೂ ಸೇರಿ ಈ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಬೇಕು; ಮತ್ತೆ ಪ್ರಾರಂಭದಲ್ಲೇ ತಮ್ಮನ್ನು ವಿನಂತಿ ಮಾಡುವಂಥದ್ದು: ದಯಮಾಡಿ ಈ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಎಲ್ಲರೂ ಅವರವರ ಅಭಿಪ್ರಾಯ ವ್ಯಕ್ತಪಡಿಸಲು ನಂತರ ನೀವು ಯಾವುದೇ ತೀರ್ಮಾನ ತೆಗೆದುಕೊಳ್ಳಬಹುದು. ಇಡೀ ರಾಜ್ಯದ ಜನ ಈ ಭೂಮಾಫಿಯಾ ಭೂಕಬಳಿಕೆ ಬಗ್ಗೆ ಕುಂತಲ್ಲಿ ನಿಂತಲ್ಲಿ ಚರ್ಚೆ ಮಾಡುತ್ತಿದ್ದಾರೆ. ನಮ್ಮ ಜೆಡಿಎಸ್ ಸ್ನೇಹಿತರು ಚುನಾವಣಾ ಪ್ರಣಾಳಿಕೆಯಲ್ಲಿ ಭೂಹಗರಣ ಮಾಡಿರುವ ವ್ಯಕ್ತಿಗಳನ್ನು ನಾವು ಅಧಿಕಾರಕ್ಕೆ ಬಂದ ತಕ್ಷಣ 24 ಗಂಟೆಯಲ್ಲಿ ಮಾಡುವ ಕೆಲಸ ಅವರನ್ನು ಜೈಲಿಗೆ ಕಳಿಸುವುದು ಅದಕ್ಕಾಗಿ ಅಧಿಕಾರಕ್ಕೆ ನಮಗೆ ಅವಕಾಶ ಮಾಡಿಕೊಡಿ ಎಂದು ಪ್ರಣಾಳಿಕೆಯಲ್ಲೇ ಹೇಳಿದ್ದರು. ನಾನು ಅವರನ್ನು ಅಭಿನಂದಿಸುತ್ತೇನೆ. ಯಾವುದೋ ಒಂದು ಅನಿವಾರ್ಯ ಕಾರಣಕ್ಕಾಗಿ ಜೆಡಿಎಸ್‌ನ ಮತ್ತು ಕಾಂಗ್ರೆಸಿನ ಸ್ನೇಹಿತರು ಒಟ್ಟಿಗೇ ಸರ್ಕಾರ ನಡೆಸುವಂತಹ ಒಂದು ಸಂದರ್ಭ ಬಂದಿದ್ದರೂ ಹೀಗೆ ಒಟ್ಟಿಗೆ ಸಮ್ಮಿಶ್ರ ಸರ್ಕಾರ ನಡೆಸುತ್ತಿರುವ ಸಂದರ್ಭದಲ್ಲೂ ಸನ್ಮಾನ್ಯ ದೇವೇಗೌಡರು ಯಾರು ಅವತ್ತಿನಿಂದ ಇವತ್ತಿನವರೆಗೆ ಈ ಭೂಕಬಳಿಕೆ ಬಗ್ಗೆ ನಿಷ್ಠೂರವಾಗಿ ಮಾತನಾಡುತ್ತಿದ್ದಾರೆ. ಬಹಳ ಸ್ಪಷ್ಟವಾಗಿ ಎರಡು ಮೂರು ಸಂಗತಿಗಳನ್ನು ಹೇಳಿದ್ದಾರೆ. ಮೊದಲನೆಯದು, ಸುಮಾರು 45 ಸಾವಿರ ಎಕರೆ ಬೆಂಗಳೂರು ಸುತ್ತಮುತ್ತ ಭೂಕಬಳಿಕೆಯಾಗಿದೆ. ಹೈಕೋರ್ಟ್‌ನಲ್ಲಿ ದಾಖಲೆಗಳನ್ನು ತಿರುಚಿ ಅನುಕೂಲ ಮಾಡಿಕೊಟ್ಟು ಡಿಕ್ರಿಯಾಗಿದೆ. ತೀರ್ಮಾನ ಆಗಿದೆ. ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಈ 45 ಸಾವಿರ ಎಕರೆಯಿಂದ ಮೂರೂವರೆ ಸಾವಿರ ಕೋಟಿ ಸರ್ಕಾರದ ಬೊಕ್ಕಸಕ್ಕೆ ಆದಾಯ ಬರುತ್ತದೆ. ಇಂತಹ ಗಂಭೀರ ಆರೋಪವನ್ನು ತಮ್ಮ ಕ್ಯಾಬಿನೆಟ್ ಸಚಿವರ ಸಮಕ್ಷಮ ಸ್ವತಃ ಉಪಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಎಂ.ಪಿ.ಪ್ರಕಾಶ್ ಇತರ ಎಲ್ಲರ ಸಮಕ್ಷಮ ಈ ಆರೋಪ ಮಾಡಿದ್ದಾರೆ. ಮತ್ತೆ ಇದರ ವಿರುದ್ಧ ನಾನು ರಾಷ್ಟ್ರಪತಿಗಳನ್ನು ಭೇಟಿ ಮಾಡುತ್ತೇನೆ. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರನ್ನು ಭೇಟಿ

ಮಾಡುತ್ತೇನೆ ಎಂದೂ ಅವರು ಹೇಳಿದ್ದಾರೆ. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಇಷ್ಟು ದೊಡ್ಡ ಹಗರಣ ಇನ್ನೆಂದೂ ನಡೆದಿರಲಿಕ್ಕೆ ಸಾಧ್ಯವಿಲ್ಲ. ಕಳೆದ ಹತ್ತಾರು ವರ್ಷಗಳಿಂದ ಯಾರು ಆಡಳಿತದಲ್ಲಿ ಇದ್ದರೋ ಅವರೆಲ್ಲರೂ ಈ ರೀತಿ ಒಂದು ಪರೋಕ್ಷ ಸಹಕಾರ ನೀಡುತ್ತ ಬೆಂಗಳೂರು ಸುತ್ತಮುತ್ತ ಇಷ್ಟು ದೊಡ್ಡ ಪ್ರಮಾಣದ ಭೂಹಗರಣಕ್ಕೆ ಕಾರಣಕರ್ತರಾಗಿದ್ದಾರೆ. ನನಗೆ ಆಘಾತ ತರುವ ಒಂದು ಸಂಗತಿಯೆಂದರೆ – ವಾಟಾಳ್‌ನಾಗರಾಜ್, ಮಾಧುಸ್ವಾಮಿ ಯವರಿಗೆ ಗೊತ್ತಿರುವಂಥದು– ಕಂದಾಯ ಸಚಿವ ಎಂ.ಪಿ.ಪ್ರಕಾಶರು ಒಂದು ಮಾತು ಹೇಳಿದ್ದಾರೆ. 30–5–2005ರಂದು ಒಂದು ಸಂದರ್ಶನದಲ್ಲಿ ಅವರು ಹೇಳಿರುವ ಮಾತು: ಉದಯವಾಣಿಯಲ್ಲಿ ನಮ್ಮ ಪ್ರಭುದೇವ ಶಾಸ್ತ್ರಿಮತ್ ಸಂದರ್ಶನ ಮಾಡಿರುವುದು. ಭೂಕಳ್ಳರಲ್ಲಿ ಎಲ್ಲ ಪಕ್ಷದ ರಾಜಕಾರಣಿಗಳಿದ್ದಾರೆ ಎಂದು ಹೇಳಿದ್ದಾರೆ. ದೇವೇಗೌಡರು 45 ಸಾವಿರ ಎಕರೆ ಭೂಕಬಳಿಕೆ ಆಗಿದೆ ಅಂದರೆ ಕಂದಾಯ ಸಚಿವ ಎಂ.ಪಿ.ಪ್ರಕಾಶ್ ಆ ಸಂದರ್ಶನದಲ್ಲಿ 33 ಸಾವಿರ ಎಕರೆ ಕಬಳಿಕೆಯಾಗಿದೆಯೆಂದು ಸಂದರ್ಶನದಲ್ಲಿ ನೇರವಾಗಿ ಎಂ.ಪಿ. ಪ್ರಕಾಶ್ ಮಾಡಿರುವ ಆರೋಪ. ದೇವೇಗೌಡರು 45 ಸಾವಿರ ಹೇಳಿದರು. ಅದೇನು ಬಹಳ ವ್ಯತ್ಯಾಸವಿಲ್ಲ 33 ಸಾವಿರ ಎಂದು ಹೇಳಿರುವುದು 45 ಸಾವಿರ ಆಗಬಹುದು 50 ಸಾವಿರ ಆಗಬಹುದು. ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗಿರುವ ಸಂಗತಿಯೆಂದರೆ ಇದರಲ್ಲಿ ಎಲ್ಲ ಪಕ್ಷಗಳ ರಾಜಕಾರಣಿಗಳಿದ್ದಾರೆ ಎಂದಿರುವುದು. ನಾನು ಕಂದಾಯ ಸಚಿವರಿಗೆ ಒತ್ತಾಯ ಮಾಡುತ್ತೇನೆ: ದಯಮಾಡಿ ಒಂದು ಕ್ಷಣ ತಡಮಾಡದೆ ಯಾವ್ಯಾವ ಪಕ್ಷದ ರಾಜಕೀಯ ಮುಖಂಡರು ಈ ಭೂಹಗರಣದಲ್ಲಿ ಪಾಲುದಾರರಾಗಿದ್ದಾರೆ ಎಂಬುದರ ಮಾಹಿತಿ ಈ ಸದನದಲ್ಲಿ ಕೊಡಬೇಕು. ಇಲ್ಲದಿದ್ದರೆ 224 ಜನಪ್ರತಿನಿಧಿಗಳಿಗೆ ರಸ್ತೆಯಲ್ಲಿ ತಲೆತಗ್ಗಿಸಿ ಓಡಾಡಬೇಕಾದ ಪರಿಸ್ಥಿತಿ ಬರುತ್ತದೆ. ಕಂದಾಯ ಸಚಿವರು ಇಂತಹ ಹೇಳಿಕೆ ಕೊಡುವ ಕಾಲದಲ್ಲಿ ಬಹಳ ಜವಾಬ್ದಾರಿಯಿಂದ ಹೇಳಿಕೆ ಮಾಡಬೇಕಾಗುತ್ತದೆ. ಇದೊಂದು ತರಹ ಬೇಜವಾಬ್ದಾರಿ ಹೇಳಿಕೆಯೆಂದು ಕರೆಯಲು ಇಚ್ಛೆಪಡುತ್ತೇನೆ. ಮತ್ತೆ ನಾನು ಕಂದಾಯ ಸಚಿವರನ್ನು ಕೇಳಲಿಚ್ಛಿಸುತ್ತೇನೆ : 15 ತಿಂಗಳು ಕಳೆದು ಹೋಯಿತಲ್ಲ; ನೀವು ಕಂದಾಯ ಸಚಿವರಾಗಿ, ಇವತ್ತು ಸ್ವತಃ ಸನ್ಮಾನ್ಯ ದೇವೇಗೌಡರೇ ಒಬ್ಬ ಮಾಜಿ ಪ್ರಧಾನಿಯಾಗಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಜವಾಬ್ದಾರಿಯಿಂದ ಈ ರೀತಿ ಹೇಳಿಕೆ ಕೊಟ್ಟ ಮೇಲೆ ನೀವು ಇದುವರೆಗೂ ತಗೊಂಡಿರುವ ಕ್ರಮವೇನು? ನಿಮ್ಮ ಪ್ರಕಾರವೇ 33 ಸಾವಿರ ಎಕರೆ ಭೂಕಬಳಿಕೆಯಾಗಿದ್ದರೆ ಸರ್ಕಾರದ ವಶಕ್ಕೆ ಎಷ್ಟು ತಗೊಂಡಿದ್ದೀರಾ? ಎಷ್ಟು ಜನರನ್ನು ಅಪರಾಧ

ಸಂಹಿತೆ ಪ್ರಕಾರ ಬಂಧಿಸಿದ್ದೀರಾ? ಎಷ್ಟು ಅಧಿಕಾರಿಗಳನ್ನು ಮನೆಗೆ ಕಳುಹಿಸಿದ್ದೀರಾ? ಜೈಲಿಗೆ ಕಳುಹಿಸಿದ್ದೀರಾ? ಕ್ರಮ ತೆಗೆದುಕೊಂಡಿದ್ದೀರಾ? ಈ ಮಾಹಿತಿಗಳನ್ನು ಎಂ.ಪಿ.ಪ್ರಕಾಶರು ಸ್ಪಷ್ಟವಾಗಿ ಈ ಸದನಕ್ಕೆ ನೀಡಬೇಕಾಗುತ್ತದೆ. ದೇವೇಗೌಡರ ಹೇಳಿಕೆ ನೋಡಿದ ಮೇಲೆ ನಮ್ಮ ಕಾಂಗ್ರೆಸ್ ಶಾಸಕ ಸ್ನೇಹಿತರು ದೇವೇಗೌಡರಿಗೆ ಸಾರ್ವಜನಿಕವಾಗಿ ಸವಾಲು ಹಾಕಿದ್ದಾರೆ. ಯಾರು ಇದೆಲ್ಲ, 45 ಸಾವಿರ ಎಲ್ಲಿ ಭೂಕಬಳಿಕೆಯಾಗಿದೆ? ತಕ್ಷಣ ಆ ವಿವರ ನೀವು ಬಹಿರಂಗಗೊಳಿಸಬೇಕು. ಇಲ್ಲದೇ ಇದ್ದರೆ ಕ್ಷಮಾಪಣೆ ಕೇಳಬೇಕೆಂದು ಹೇಳಿದ್ದಾರೆ. ಹೀಗೆ ಈ ಭೂಕಬಳಿಕೆ ನೂರಕ್ಕೆ ನೂರು ಆಗಿರುವುದು ಸತ್ಯ. ಅದರಲ್ಲೇನು ಎರಡು ಮಾತಿಲ್ಲ. ಆದರೆ ಭೂಕಬಳಿಕೆಗೆ ರಕ್ಷಣೆ ಕೊಡುತ್ತಿರುವವರು ಸರ್ಕಾರದಲ್ಲಿರುವ ನೀವೇನೆ. ರಸ್ತೆಯಲ್ಲಿ ಬೊಬ್ಬೆ ಹೊಡೆಯುವವರೂ ನೀವೇ, ಒಳಗಡೆ ರಕ್ಷಣೆ ಕೊಡುತ್ತಿರುವವರೂ ನೀವೇ. ಇದಕ್ಕೆ ಯಾರು ಜವಾಬ್ದಾರರು? ಬೇಲಿಯೇ ಎದ್ದು ಹೊಲ ಮೇಯ್ದಂತಾಗುವುದಿಲ್ಲವೇ? ಹೆತ್ತ ತಾಯಿಯೇ ತನ್ನ ಮಗುವಿಗೆ ವಿಷದ ಹಾಲನ್ನು ಕುಡಿಸಿದರೆ ಆ ಮಗುವನ್ನು ಯಾರು ಉಳಿಸಬೇಕು? ಸರ್ಕಾರವೇ ಈ ರೀತಿ ಶಾಮೀಲಾಗಿ ಈ ಭೂ ಹಗರಣಕ್ಕೆ ಬೆಂಬಲಿಗರಾಗಿ ನಿಂತರೆ ಈ ರಾಜ್ಯವನ್ನು ಯಾರು ರಕ್ಷಣೆ ಮಾಡಬೇಕು? ಇದು ಇವತ್ತು ನಮ್ಮ ಮುಂದೆ ಇರುವಂಥ ಪ್ರಶ್ನೆ. ಇವತ್ತು ಈ ಕಾರಣಕ್ಕಾಗಿ ನೀವು ದಿಢೀರ್ ಅಂತ ಈ ನಮ್ಮ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 95ರ ಅಡಿ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸುವುದು ಅನುಮತಿ ನೀಡುವ ಬಗ್ಗೆ ಪರಿಪಾಲಿಸುವ ಕುರಿತು ನೂತನ ಒಂದು ಮಾರ್ಗಸೂಚಿಯನ್ನು ತಾವು ಹೊರಡಿಸಿದ್ದೀರಿ. ಈ ಮಾರ್ಗಸೂಚಿಯ ಪ್ರಕಾರ ಯಾರು ಅವನ ಜೀವನ ಪೂರ್ತಿ ಅಲ್ಪಸ್ವಲ್ಪ ಹಣವನ್ನು ಉಳಿಸಿಕೊಂಡು ಅದು ಕಂದಾಯ ಇಲಾಖೆಗೆ ಸೇರಿದಂಥ ಸೈಟ್ ಇರಬಹುದು. ಯಾರೋ ಪ್ರೈವೇಟ್ ಲೇಔಟ್ ಮಾಡಿದಂಥ ಆ ನಿವೇಶನ ಇರಬಹುದು. ಅವನು ಮೂರು, ನಾಲ್ಕು, ಐದು ಲಕ್ಷ ಈ ರೀತಿ ಕೊಟ್ಟು ಅವನು ಬೀದಿ ಪಾಲಾಗುತ್ತಿರುವುದು ಕಡು ಬಡವ ಸಾಮಾನ್ಯ ಜನ. ನಿಮ್ಮ ಈ ತಿದ್ದುಪಡಿಯಿಂದ ಈ ಭೂಸುಧಾರಣಾ ಕಾಯ್ದೆಗೆ ನೀವು ಹಾಕಿರುವ ಷರತ್ತಿನಿಂದ ಯಾರು ಭೂ ಹಗರಣವನ್ನು ಮಾಡಿದ್ದಾರೆ. ಲೂಟಿ ಮಾಡಿದ್ದಾರೆ, ಅವರಿಗೇನು ತೊಂದರೆಯಾಗಲಿಲ್ಲ. ಅವರಿಗೊಂದು ರೀತಿ ಇದು ರಕ್ಷಣೆ. ಏಕೆಂದರೆ ಈ ಶ್ರೀ ಸಾಮಾನ್ಯನಿಂದ ಕೋಟ್ಯಾಂತರ ರೂಪಾಯಿಗಳನ್ನು ಅವನು ವಸೂಲಿ ಮಾಡಿ ಆಯಿತು. ತ್ರಿಶಂಕು ಸ್ಥಿತಿಯಲ್ಲಿರುವುದು ಸಾಮಾನ್ಯ ಜನ : ಯಾರ ಪಾಪಕ್ಕೆ ಯಾರು ಪ್ರಾಯಶ್ಚಿತ್ತವನ್ನು ಅನುಭವಿಸಬೇಕು. ಇದಕ್ಕೆ ಯಾರು ಜವಾಬ್ದಾರರು? ಇದಕ್ಕೆ ಯಾರು ರಕ್ಷಣೆಯನ್ನು

ಕೊಡುತ್ತೀರಿ? ಇದೂ ಸಹಾ ಇವತ್ತು ಇಲ್ಲಿ ಚರ್ಚೆಯಾಗಿ ಇದಕ್ಕೆ ಗಂಭೀರವಾದ ಒಂದು ಉತ್ತರವನ್ನು ನಾವು ಪಡೆಯಬೇಕಾಗಿದೆ. ನೋಡಿ ಹೇಗಿದೆ? ಈ ರಾಜಕೀಯ ದೊಂಬರಾಟ. ಈ ಹಿಂದೆ ನಮ್ಮ ಜೆಡಿ(ಎಸ್) ಸ್ನೇಹಿತರೇ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ರಾಜ್ಯದ ಅಭಿವೃದ್ಧಿ ಏನಾಯಿತೋ ಏನೋ ಗೊತ್ತಿಲ್ಲ. ಈ ಭೂ ಹಗರಣಕ್ಕೆ ಅಡಿಪಾಯ ಬಿದ್ದದ್ದೇನೆ ಜೆಡಿ(ಎಸ್)ನವರು ಅಧಿಕಾರದಲ್ಲಿದ್ದಂಥ ಕಾಲದಲ್ಲಿ. ಇದು ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾಯಿತು. ಅದರ ಹೊಣೆಯನ್ನು ನೀವು ಹೊರಬೇಕಾಗುತ್ತದೆ. ಭೂ ಸುಧಾರಣೆ ಕಾಯ್ದೆ ಕಲಂ 79(ಎ) 79(ಬಿ) ಮತ್ತು 80 ಕ್ಕೆ 1996ರಲ್ಲಿಯೇ ಈ ತಿದ್ದುಪಡಿಯನ್ನು ತಂದಿರಿ. ಈ ತಿದ್ದುಪಡಿ ಎನ್ನುವುದು ಈ ತಿದ್ದುಪಡಿಯನ್ನು ನೀವು ತಂದು ಇವತ್ತು ಯಾವುದೇ ಸಂಘ ಸಂಸ್ಥೆ 20 ಯೂನಿಟ್‌ಗಿಂತ ಜಾಸ್ತಿ ಜಮೀನನ್ನು ಖರೀದಿ ಮಾಡುವ ಅಧಿಕಾರ ಇರಲಿಲ್ಲ. ಪ್ರೈವೇಟ್ ಯಾರಾದರೂ ವ್ಯಕ್ತಿಗಳು ಐದು ಯೂನಿಟ್‌ಗಿಂತ ಹೆಚ್ಚು ಖರೀದಿ ಮಾಡುವ ಅಧಿಕಾರ ಇರಲಿಲ್ಲ. ಒಂದು ಯೂನಿಟ್ ಎಂದರೆ ಐದು ಎಕರೆ. ಯಾವುದೇ ಸಂಘ ಸಂಸ್ಥೆಗಳು 20 ಯೂನಿಟ್ ಎಂದರೆ ನೂರು ಎಕರೆ ವರೆಗೆ. ವೈಯಕ್ತಿಕವಾಗಿ ಯಾರಾದರೂ ವ್ಯಕ್ತಿ ಎಂದರೆ 5 ಎಕರೆ.

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಸಹಕಾರ ಸಚಿವರು) :– Agriculture Lands - irrigated up to ten units, individuals can own; dry land up to 54 acres. Irrigated A-Class lands up to 10 units. Dry land D-Class up to 54 acres.

ಶ್ರೀ ಬಿ.ಎಸ್.ಯಡಿಯೂರಪ್ಪ :– ಈ ತಿದ್ದುಪಡಿಯನ್ನು ಈ ಭೂಸುಧಾರಣಾ ಕಾಯ್ದೆ ಮೂಲ ಉದ್ದೇಶಕ್ಕೆ ಕೊಡಲಿಪೆಟ್ಟನ್ನು ಕೊಟ್ಟು ಈ ತಿದ್ದುಪಡಿಯನ್ನು ನೀವು ತಂದಿರಿ. ಇದರಿಂದ ಬೆಂಗಳೂರು ಸುತ್ತಮುತ್ತ ಬೇನಾಮಿ ಹೆಸರಿನಲ್ಲಿ ನೂರಾರು ಎಕರೆ ಜಮೀನನ್ನು ಕೊಳ್ಳುವುದಕ್ಕೆ ಅದರ ಮೂಲಕ ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡುವುದಕ್ಕೆ, ಜನರಿಗೆ ಮೋಸ ಮಾಡುವುದಕ್ಕೆ ನೀವು 1996ರಲ್ಲಿ ತಿದ್ದುಪಡಿಯನ್ನು ತಂದಂಥ ಕೀರ್ತಿ ನಿಮಗೆ ಸಲ್ಲಿಸಬೇಕು. ಅವತ್ತು ಅಧಿಕಾರದಲ್ಲಿದ್ದ ಜನಕ್ಕೆ ನಿಮ್ಮ ಪಾಪದ ಫಲದಿಂದ ಇವತ್ತು ಶ್ರೀಸಾಮಾನ್ಯ ಇವತ್ತು ಗೊಂದಲಕ್ಕೆ ಸಿಕ್ಕಿ ನರಳುವಂಥ ಒಂದು ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಬಂದಿದೆ. ನಮ್ಮ ಸನ್ಮಾನ್ಯ ಎಂ.ಪಿ.ಪ್ರಕಾಶ್‌ರವರು ಮತ್ತೆ ಸನ್ಮಾನ್ಯ ದೇವೇಗೌಡರು ನ್ಯಾಯಾಲಯ ಯಥಾಸ್ಥಿತಿ ಆದೇಶವನ್ನು ನೀಡಿದ ನಂತರವೂ ಸಹಾ ಆ ಜಾಗದಲ್ಲಿ ಭೂಗಳ್ಳರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಆ ಕಟ್ಟಡವನ್ನು ಕಟ್ಟುವುದನ್ನು ಮುಂದುವರಿಸಿದ್ದಾರೆ. ಪೋಲೀಸ್

ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ನನಗೆ ಒಂದೇ ದಿವಸ ಮೂರು ಸಾವಿರ ಪ್ರಕರಣಗಳು ನನ್ನ ಕೈಗೆ ಸಿಕ್ಕಿದ್ದಾವೆ. ದಾಖಲೆಗಳನ್ನು ಕೊಟ್ಟಿದ್ದಾರೆಂದು ದೇವೇಗೌಡರು ಆರೋಪವನ್ನು ಮಾಡಿದ್ದಾರೆ. ಆದ್ದರಿಂದ ಎಂ.ಪಿ.ಪ್ರಕಾಶ್‌ರವರು ಉತ್ತರ ಕೊಡುವ ಕಾಲದಲ್ಲಿ ಈ ಭೂ ಹಗರಣ 1996 ರಿಂದ ಅಥವಾ ಅದಕ್ಕಿಂತ ಮುಂಚೆ ಇದೇನು ಪ್ರಾರಂಭವಾಗಿದೆ, ಇದುವರೆಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದೆಲ್ಲದರ ಮಾಹಿತಿಯನ್ನು ಒದಗಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಸನ್ಮಾನ್ಯ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಒಂದು ತೀರ್ಮಾನವನ್ನು ಕ್ಯಾಬಿನೆಟ್‌ನಲ್ಲಿ ಮಾಡಿದರು. ಈ ಭೂ ಕಬಳಿಕೆ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು. ಆಮೇಲೆ ಸನ್ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾದ ಮೇಲೆ ಇದನ್ನು ಕೈಬಿಟ್ಟರು. ಅಂದರೆ ಅವತ್ತೇನೆ ಜೆ.ಹೆಚ್.ಪಟೇಲರು ಈ ಭೂ ಕಬಳೀಕೆಯ ವಿವರವನ್ನು ಪಡೆದು ಅನೇಕ ಪ್ರಭಾವಿಗಳು ಇದರಲ್ಲಿ ಕೈವಾಡ ಇದೆ ಎಂದು ಗೊತ್ತಾದ ಮೇಲೆ ರಾಜಕಾರಣಿಗಳ ಕೈವಾಡ ಇದೆ ಎಂದು ಗೊತ್ತಾದ ಮೇಲೆ ಇದನ್ನು ಸಿಬಿಐಗೆ ವಹಿಸಬೇಕೆಂದು ಸಂಪುಟದ ತೀರ್ಮಾನವಾದ ಮೇಲೆ ಅದನ್ನು ಕೈಬಿಟ್ಟಿದ್ದು ಏಕೆ? ನಾನು ಇವತ್ತು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ತತ್‌ಕ್ಷಣ ಈ ಭೂ ಕಬಳೀಕೆ ಏನು 45 ಸಾವಿರ ಎಕರೆಯಾಗಿದೆ ಮಾನ್ಯ ದೇವೇಗೌಡರ ಪ್ರಕಾರ, 33 ಸಾವಿರ ಎಕರೆ ಭೂ ಕಬಳಿಕೆಯಾಗಿದೆ ಸನ್ಮಾನ್ಯ ಕಂದಾಯ ಸಚಿವರು ಪ್ರಕಾಶ್‌ರವರ ಪ್ರಕಾರ, ಇದನ್ನು ತತ್‌ಕ್ಷಣ ಸಿಬಿಐ ತನಿಖೆಗೆ ಒಳಪಡಿಸಬೇಕು. ಯಾರು ಈ ಭೂ ಕಬಳಿಕೆಗೆ ಹೈಕೋರ್ಟಿಗೆ ದಾಖಲೆಗಳನ್ನು ತಿರುಚಿ ಭೂ ಕಬಳಿಕೆಯನ್ನು ಮಾಡಿದಂಥ ವ್ಯಕ್ತಿಗಳ ಪರವಾಗಿ ತೀರ್ಮಾನ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೋ ಅಂಥ ಅಧಿಕಾರಿಗಳನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಅನ್ವಯ ಅವರನ್ನು ಬಂಧಿಸಿ ಕಾನೂನಿನಂತೆ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಯಾವ ಯಾವ ಪ್ರಭಾವಿ ರಾಜಕಾರಣಗಳು ಈ ಹಗರಣದಲ್ಲಿ ಪಾಲುಗೊಂಡಿದ್ದಾರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಇವತ್ತು ಮುಖ್ಯಮಂತ್ರಿಗಳು ಹೇಳಿದ್ದಾರೆ, ಏಪ್ರಿಲ್ 19 ನೇ ತಾರೀಖು, "ಬೆಂಗಳೂರು ಸುತ್ತಮುತ್ತ ನಡೆದಿರುವ ಭೂಗಳ್ಳತನ ಪ್ರಕರಣದ ಬಗ್ಗೆ ಸರ್ಕಾರ ಸೂಕ್ತ ತನಿಖೆಯನ್ನು ನಡೆಸಲಿದೆ". ಸಿದ್ಧರಾಮಯ್ಯನವರು ಹೇಳಿದ್ದಾರೆ, 'ಭೂಮಾಫಿಯಾಗಳು ನ್ಯಾಯವನ್ನು ಕೊಂಡುಕೊಳ್ಳುವ ಮಟ್ಟಕ್ಕೆ ಬೆಳೆದಿದೆ. ನ್ಯಾಯವನ್ನು ಅವರು ಕೊಳ್ಳುತ್ತಾರೆ. ಕೋರ್ಟಿಗೆ ಹೋಗಿ ದುಡ್ಡನ್ನು ಕೊಟ್ಟು ತಮ್ಮ ಪರವಾಗಿ ತೀರ್ಪು ಬರುವಂತೆ ಮಾಡುತ್ತಾರೆ. ಭೂ ಮಾಫಿಯಾ ವಿರುದ್ಧ ಕ್ರಮ

ಕೈಗೊಳ್ಳಲು ಸರ್ಕಾರದ ಒಳಗೆ ಹಾಗೂ ಹೊರಗೆ ರಾಜಕೀಯ ಇಚ್ಛಾಸಕ್ತಿಯನ್ನು ಪ್ರದರ್ಶಿಸಲು ಕಟಿಬದ್ಧರಾಗಿದ್ದೇವೆ. ಇದನ್ನು ಸನ್ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ. 1998–99ರಲ್ಲಿಯೇ ಬೆಂಗಳೂರು ಸುತ್ತಮುತ್ತ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂಥ ಈ ಸರ್ಕಾರಿ ಜಮೀನನ್ನು ತೆರವು ಮಾಡುವುದಕ್ಕೋಸ್ಕರ ಸುಮಾರು 2200 ಎಕರೆ ತೆರವು ಮಾಡುವುದಕ್ಕೆ ನೀಲಿ ನಕ್ಷೆ ಸಹಾ ತಯಾರಾಗಿತ್ತು. ಆ ಕಾಲದಲ್ಲಿ ಎನ್ನುವಂಥದ್ದು ದಾಖಲೆಗಳು ನನ್ನ ಹತ್ತಿರ ಇದೆ. ಮತ್ತು ಸಚಿವ ಎಂ.ಪಿ.ಪ್ರಕಾಶ್ ಅವರಿಗೆ ಸಚಿವ ಸಂಪುಟದಲ್ಲಿ ಏಪ್ರಿಲ್ 22ರ ಮುಂಚೆ ಭೂಗಳ್ಳರ ವಶದಲ್ಲಿರುವಂಥ ಸರ್ಕಾರಿ ಭೂಮಿ ಹರಾಜನ್ನು ಮಾಡುವುದಕ್ಕೆ ಅದರ ಮೇಲೆ ಎಲ್ಲಾ ರೀತಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಎಂ.ಪಿ.ಪ್ರಕಾಶ್ ಅವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಎಂ.ಪಿ.ಪ್ರಕಾಶ್ ಅವರಿಗೆ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಹಿಂದೆ ಜೆಡಿ(ಎಸ್) ಸರ್ಕಾರ ಅಧಿಕಾರದಲ್ಲಿದ್ದ ಕಾಲದಲ್ಲೂ ನೀವು ಸಚಿವರಾಗಿದ್ದಿರಿ. ಈಗಲೂ ಸಚಿವರಾಗಿದ್ದೀರಿ. ಆವತ್ತಿನಿಂದ ಇವತ್ತಿನವರೆಗೆ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲನ್ನು ಕುಡಿದರೆ ಯಾರೂ ನೋಡಲ್ಲ ಎನ್ನುವ ರೀತಿಯಲ್ಲಿ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟುಕೊಂಡು ಬಂದು ನೀವೇನೆ ಇವತ್ತು ಈ ಮಂತ್ರಿಮಂಡಲ ನಿಮಗೆ ಈ ಅಧಿಕಾರವನ್ನು ಕೊಟ್ಟಮೇಲೆ ಇವತ್ತಿನವರೆಗೆ ಕ್ರಮವನ್ನು ತೆಗೆದುಕೊಳ್ಳದೇನೆ ಕೈಕಟ್ಟಿ ಕುಳಿತಿರುವುದಕ್ಕೆ ಕಾರಣವೇನು? ಒಬ್ಬ ಕಂದಾಯ ಸಚಿವರಾಗಿ ಈ ರೀತಿ ಅಧಿಕಾರವನ್ನು ಕೊಟ್ಟಮೇಲೆ ನಾನು ಭೂ ಕಬಳಿಕೆ ಆಗಿರುವಂಥ ಸ್ಥಳಗಳಿಗೆ ಹೋಗಿ ನಮ್ಮ ಅಧಿಕಾರಿಗಳು ಹೋಗಿ ಆ ಭೂಮಿಯನ್ನು ವಶಪಡಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡುವುದಕ್ಕೆ ಹೋದರೆ ಪ್ರಭಾವಿ ರಾಜಕಾರಣಿಗಳು ಮಧ್ಯೆ ಬಂದು ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ ಮಾಜಿ ಸಚಿವರುಗಳು. ಪ್ರಮುಖರು ಬರುತ್ತಿದ್ದಾರೆ. ಈ ರೀತಿ ಪತ್ರಿಕಾ ಹೇಳಿಕೆಯನ್ನು ಕೊಡುತ್ತೀರಲ್ಲ. ಇದು ಬೇಜವಾಬ್ದಾರಿತನ ಅಲ್ಲವೇನು? ಕಾನೂನುಬಾಹಿರವಾಗಿ ಈ ರೀತಿ ಕ್ರಮವನ್ನು ತೆಗೆದುಕೊಂಡಾಗ ಅವರ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾದುದು ನಿಮ್ಮ ಕರ್ತವ್ಯವಾಗಿತ್ತು ತಾನೇ? ಅದನ್ನು ಮಾಡದೇ ಪ್ರಚಾರಕ್ಕಾಗಿ ಪತ್ರಿಕಾ ಹೇಳಿಕೆಯನ್ನು ಕೊಡುವಂಥದ್ದು ನಿಮ್ಮ ಬೇಜವಾಬ್ದಾರಿತನದ ಪರಮಾವಧಿ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಕಾಂಗ್ರೆಸ್‌ನ ಶಾಸಕರು ಬಹಿರಂಗವಾಗಿ ದೇವೇಗೌಡರಿಗೆ ಬಹಿರಂಗ ಸವಾಲನ್ನು ಹಾಕಿ ಇದು ಎಲ್ಲಿ ಈ ರೀತಿ ಭೂ ಕಬಳಿಕೆಯಾಗಿದೆ. ಇದನ್ನು ಬಹಿರಂಗಪಡಿಸಿ ಇದರ ಬಗ್ಗೆ ಕ್ಷಮೆಯನ್ನು ಯಾಚಿಸಿ ಇಲ್ಲ ಎಂದರೆ

ಎಂ.ಪಿ.ಪ್ರಕಾಶ್ ಅವರನ್ನು ಸಚಿವಸಂಪುಟದಿಂದ ಕೈಬಿಡಿ. ನಮ್ಮ ಒಕ್ಕಲಿಗ ಸಮಾಜದ ಎಲ್ಲಾ ಶಾಸಕರು ಒಕ್ಕೊರಲಿನಿಂದ ಸರ್ಕಾರಕ್ಕೆ ದೇವೇಗೌಡರಿಗೆ ಒತ್ತಾಯವನ್ನು ಮಾಡುವಂಥದ್ದು. ನಮ್ಮ ಈ ಮನೆಯ ಸದಸ್ಯರು ರಾಜ್ಯ ಜೆಡಿಎಸ್‌ನ ಕಾರ್ಯಾಧ್ಯಕ್ಷರಾದ ಶ್ರೀ ಕುಮಾರಸ್ವಾಮಿ ಅವರು 'ಭೂ ಕಬಳಿಕೆ, ಧರ್ಮಸಿಂಗ್, ಕೇವಲ ಭರವಸೆಯ ದೊರೆ' ಎಂದು ಹೇಳಿದ್ದಾರೆ. ಭೂ ಕಬಳಿಕೆ, ಧರ್ಮಸಿಂಗ್ ಕೇವಲ ಭರವಸೆಯ ದೊರೆ ಎಂದು ಅವರ ಹೇಳಿಕೆ. ಲ್ಯಾಂಡ್ ಮಾಫಿಯಾಗಳ ಸುಳ್ಳು ದಾಖಲು ಸೃಷ್ಟಿಸಿ ಬೆಂಗಳೂರು ಸುತ್ತಮುತ್ತಲಿನ ಭಾರಿ ಬೆಲೆಯ ಭೂಮಿಯನ್ನು ಕಬಳಿಸುತ್ತಿದ್ದಾರೆಂದು ಶ್ರೀ ಕುಮಾರಸ್ವಾಮಿಯವರ ಹೇಳಿಕೆ. ಇದು ಯಾವುದು ಏನೂ ಮುಚ್ಚಿಡುವಂತಹ ಸಂಗತಿಗಳು ಉಳಿದಿಲ್ಲ. ನನಗೆ ಆಶ್ಚರ್ಯ ಆಗುತ್ತಿದೆ. ನಮ್ಮ ಮಾನ್ಯ ಕಂದಾಯ ಸಚಿವರು ಇಂತಹ ಗಂಭೀರವಾದಂತಹ ವಿಷಯಕ್ಕೆ ನಿಲುವಳಿ ಸೂಚನೆ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಬಹುಶಃ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಮಾನ್ಯ ಕಂದಾಯ ಸಚಿವರು ಇಲ್ಲಿ ಇರಬೇಕು. ಅವರ ಕರ್ತವ್ಯ ಸದನ ನಡೆಯುವಂತಹ ಕಾಲದಲ್ಲಿ ಇಂತಹ ಗಂಭೀರವಾದಂತಹ ವಿಚಾರ ಚರ್ಚೆ ನಡೆಯುವಾಗ, ಬಹುಶಃ ಇಲ್ಲಿ ಏನು ಚರ್ಚೆ ಆಗುತ್ತದೆ? ಅದಕ್ಕೇನು ಉತ್ತರ ಕೊಡಬೇಕು ಎಂದು ಈಗಾಗಲೇ ಕುಳಿತಿರಬಹುದು. ನನಗೆ ಗೊತ್ತಿಲ್ಲ. ಆದರೆ ಇವತ್ತು ನಾನು ಮಾನ್ಯ ಎಂ.ಪಿ.ಪ್ರಕಾಶ್ ಅವರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಇಲ್ಲೊಂದು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಈ ಮನೆಯಲ್ಲಿ ಹೇಳಿದ್ದೀರಿ. ಅನಧಿಕೃತ ಒತ್ತುವರಿ ಮತ್ತು ಖೋಟಾ ದಾಖಲೆಗಳನ್ನು ಸೃಷ್ಟಿಸಿ ಭೂ ಕಬಳಿಕೆಯಲ್ಲಿ ತೊಡಗಿರುವವರಿಗೆ ಭೂ ಕಂದಾಯ ಕಾಯಿದೆ ಅಡಿಯಲ್ಲಿ ಶಿಕ್ಷಾರ್ಹ – ಕಾಗ್ನಿಜಬಲ್ ಅಫೆನ್ಸ್ ಅಡಿ ಕ್ರಮ ಕೈಗೊಳ್ಳಲು ಸರ್ಕಾರ ಯೋಚಿಸುತ್ತಿದೆ ಎಂದು ಹೇಳಿದ್ದೀರಿ. ಇದರ ಅರ್ಥ ಏನು ಸ್ವಾಮಿ? ಅವರಿಗೆ ಇದು ಶಿಕ್ಷಾರ್ಹ ಅಪರಾಧ ಎಂದು ಹೇಳಿ ಒಂದು ಕಡೆ ಕ್ರಮ ತೆಗೆದುಕೊಳ್ಳುವುದಕ್ಕೆ ನಿರ್ಧಾರ ಮಾಡಿ ಮುಂದೆ ಹೆಜ್ಜೆ ಇಡಬೇಕಾದಂತಹ ನೀವು ಈ ಬಗ್ಗೆ ಯೋಚನೆ ಮಾಡುತ್ತಿದ್ದೇವೆಂದು ಹೇಳುವುದಾದರೆ ಯಾರನ್ನು ರಕ್ಷಣೆ ಮಾಡುವಂತಹ ಉದ್ದೇಶ ಇದು? ಯಾರನ್ನು ಕೇಳಿ ಈ ನೋಂದಾವಣೆ ಕಾರ್ಯವನ್ನು ನಿಲ್ಲಿಸಿದಿರಿ? ಮತ್ತು ಯಾರನ್ನು ಕೇಳಿ ನೋಂದಾವಣೆ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿಕೆಯನ್ನು ಕೊಡುತ್ತಿದ್ದೀರಿ? ನಾನು ಗಂಭೀರವಾದ ಆರೋಪ ಮಾಡುತ್ತೇನೆ. ಸಂಸತ್ ಸದಸ್ಯರಾದ ಶ್ರೀ ಆರ್.ಎಲ್.ಜಾಲಪ್ಪನವರು ಹೇಳಿದ್ದಾರೆ. ಸುಮಾರು 200 ಕೋಟಿ ರೂಪಾಯಿ ಕೈಬದಲಾವಣೆ ಆಗಿದೆ ಎಂದು ಹೇಳಿದ್ದಾರೆ. ಅದು 200 ಅಲ್ಲ,

ಅದಕ್ಕೂ ಜಾಸ್ತಿ ಆಗಿರಬಹುದು. ಅದು ಮೊದಲನೆಯ ಕಂತು ಇರಬಹುದು. ಇದು ಶ್ರೀಸಾಮಾನ್ಯ ರಸ್ತೆಯಲ್ಲಿ ಮಾತನಾಡುತ್ತಿದ್ದಾರೆ. ಅಂದರೆ ಭೂ ಕಬಳಿಕೆ ಮಾಡಿರುವವರಿಗೆ ಏನು ಶಾಸನ ತಂದು ಅವರಿಗೇನೋ ರಕ್ಷಣೆ ಮಾಡುತ್ತೇವೆ. ಜನರಿಗೆ ಎಂದು ಬೊಬ್ಬೆ ಹೊಡೆಯುವ ನೀವು, ಒಂದು ಕಡೆ ರದ್ದು ಮಾಡುವುದು, ಇನ್ನೊಂದು ಕಡೆ ಮತ್ತೆ ರಿಜಿಸ್ಟ್ರೇಷನ್ ಪ್ರಾರಂಭ ಮಾಡುವುದಕ್ಕೆ ಒಳ ವ್ಯವಹಾರಗಳನ್ನು ಮಾಡಿಕೊಳ್ಳುವಂತಹದು. ಈ ಪರಿಸ್ಥಿತಿ ಬಂದಿದೆ ಎನ್ನುವುದಾದರೆ ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇದೆಯಾ ಎಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಭೂಕಬಳಿಕೆಯ ಬಗ್ಗೆ ಸ್ವತಃ ಮಾನ್ಯ ಎಂ.ಪಿ.ಪ್ರಕಾಶ್ ಅವರ ಹೇಳಿಕೇನೆ ಈ ಸರ್ಕಾರ ಅಧಿಕಾರದಲ್ಲಿ ಒಂದು ಕ್ಷಣ ಮುಂದುವರಿಯುವಂತಹ ನೈತಿಕ ಹಕ್ಕು ಇಲ್ಲ. ನೀವು ಅಧಿಕಾರ ಬಿಟ್ಟು ತೊಲಗಬೇಕಾಗಿದೆ. ರಾಜೀನಾಮೆ ಕೊಟ್ಟು ಹೋಗಬೇಕಾಗಿದೆ. ನಿಮಗೇನು ಅಧಿಕಾರ ಇದೆ? ಬೆಂಗಳೂರು ಸುತ್ತಮುತ್ತ ಇವತ್ತು 45 ಸಾವಿರ ಎಕರೆ ಭೂ ಕಬಳಿಕೆ ಆಗಿದೆ. 33 ಸಾವಿರ ಎಕರೆ ಭೂ ಕಬಳಿಕೆ ಆಗಿದೆ ಎಂದು ಶ್ರೀ ಎಂ.ಪಿ.ಪ್ರಕಾಶ್ ಅವರು ಒಪ್ಪಿಕೊಂಡ ಮೇಲೆ ಹಿಂದೆ ನೀವು ಅಧಿಕಾರದಲ್ಲಿ ಇದ್ದಂದಿನಿಂದ ಇಲ್ಲಿಯವರೆಗೆ ಈ ವ್ಯವಹಾರ ನಡೆಯುವುದಕ್ಕೆ, ಕುದುರಿಸುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ನೀವು ಈ ಬಗ್ಗೆ ಮಾತನಾಡುವಂತಹ ನೈತಿಕ ಹಕ್ಕು ಏನಿದೆ? ನೀವು ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇದೆಯಾ ಎಂಬ ಈ ಪ್ರಶ್ನೆಯನ್ನು ನಾನು ಕೇಳಬೇಕಾಗಿದೆ. ಇವತ್ತು ಮಾನ್ಯ ಎಂ.ಪಿ.ಪ್ರಕಾಶ್ ಅವರು ಬರುತ್ತಿದ್ದಾರೆ. ನಾನು ಮತ್ತೊಮ್ಮೆ ಪುನರಾವರ್ತನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಸಂದರ್ಭದಲ್ಲಿ ಇದನ್ನು ಹೇಳಿದರೋ ಗೊತ್ತಿಲ್ಲ. ಇವತ್ತು ಎಂ.ಪಿ.ಪ್ರಕಾಶ್ ಅಂತಹ ಅನುಭವಿ, ಹಿರಿಯ ಸಚಿವರು ಒಬ್ಬರು ಭೂಗಳ್ಳರಲ್ಲಿ ಎಲ್ಲ ಪಕ್ಷದ ರಾಜಕಾರಣಿಗಳು ಇದ್ದಾರೆ ಎಂದು ಹೇಳಿ ಸಾರಾಸಗಟಾಗಿ ನೀವು ಆರೋಪ ಮಾಡುತ್ತೀರಿ ಎನ್ನುವುದಾದರೆ ಇದು ಯಾವುದೇ ರಾಜಕೀಯ ಪಕ್ಷದ ಮುಖಂಡರು ಕೈಕಟ್ಟಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಹಿನ್ನೆಲೆ ಏನು? ಒಂದು ಹೇಳಿಕೆಯ ಪ್ರಕಾರ ನಿಮ್ಮ ಸಂದರ್ಶನದಲ್ಲಿ ನೀವು ಹೇಳಿರುವ ಪ್ರಕಾರ 33 ಸಾವಿರ ಎಕರೆ ಭೂ ಕಬಳಿಕೆ ಆಗಿದೆ ಎಂದು ಹೇಳಿದ ಮೇಲೆ ನಿಮಗೆ ಕ್ಯಾಬಿನೆಟ್ ಎಲ್ಲಾ ಅಧಿಕಾರವನ್ನು ಕೊಟ್ಟ ಮೇಲೆ ನೀವು ತತ್‌ಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿ ಬಂದಂತಹ ಕೈಗಳು ಯಾವುದು? ಯಾರ ಪ್ರಭಾವದಿಂದ ನೀವು ಈ ಕ್ರಮವನ್ನು ತೆಗೆದುಕೊಳ್ಳದೇ ಕೈಕಟ್ಟಿಕೊಂಡು ಕುಳಿತಿದ್ದೀರಿ? ಯಾವ ಅಧಿಕಾರಿಗಳು ನಿಮ್ಮ ರಾಜಕಾರಣಿಗಳ, ಮಂತ್ರಿ

ಮಂಡಲದ ಸಹೋದ್ಯೋಗಿಗಳ ಸಹಕಾರದಿಂದ ಈ ರೀತಿ ಭೂ ಕಬಳಿಕೆಗೆ ಅವಕಾಶ ಮಾಡಿಕೊಟ್ಟಾಗ ಕೋರ್ಟ್‌ನಲ್ಲಿ ಹೋಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕೋರ್ಟು ಆ ಭೂ ಕಬಳಿಕೆದಾರರ ಪರವಾಗಿ ತೀರ್ಮಾನ ಕೊಡುವಂತೆ ಆಯಿತು ಎಂದು ಹೇಳಿ ಸ್ವತಃ ಮಾಜಿ ಪ್ರಧಾನಿ ದೇವೇಗೌಡರು ಹೇಳುತ್ತಾರೆ., ಆ ಮೀಟಿಂಗ್‌ನಲ್ಲಿ ನೀವು ಇರುತ್ತೀರಿ. ಹಾಗಾದರೆ ಇದೇನು ಜಾಯಿಂಟ್ ರೆಸ್ಪಾನ್ಸಿಬಲಿಟಿ ಕ್ಯಾಬಿನೆಟ್‌ದು ಇಲ್ಲವಾ? ಇದೆಲ್ಲವನ್ನೂ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೋಸ್ಕರ ನಾವು ನಿಮ್ಮನ್ನು ಅಧಿಕಾರಕ್ಕೆ ತಂದೆವೂ? ಜನ ನಿಮ್ಮನ್ನು ಅಧಿಕಾರಕ್ಕೆ ತಂದರಾ? ಈ ಬಗ್ಗೆ ಸನ್ಮಾನ್ಯ ಎಂ.ಪಿ.ಪ್ರಕಾಶ್ ಅವರು ಉತ್ತರವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಂತಹ ವಿಷಯದಲ್ಲಿ ಉತ್ತರ ಕೊಡಲಿಕ್ಕೆ ಸರ್ಕಾರ ಏನೂ ಹಿಂಜರಿಯುವುದಿಲ್ಲ. ಆದರೆ ಪ್ರಾರಂಭದಲ್ಲಿ 10.00 ಗಂಟೆಗೆ ಬರದೇ ಇದ್ದದ್ದಕ್ಕಾಗಿ ನಾನು ಕ್ಷಮೆ ಕೇಳುತ್ತೇನೆ. ಏನು ನಡೆದಿದೆ ಎಂದು ಗೊತ್ತಿಲ್ಲ. ಈ 60ರ ನಿಯಮಗಳ ಪ್ರಕಾರ ಇವರು ಕೊಟ್ಟಿದ್ದಾರೆ. ಈ ರೂಪದಲ್ಲಿ ತಮ್ಮ ಮನವೊಲಿಕೆಗಾಗಿ ಈ ಚರ್ಚೆಯನ್ನು ಇಟ್ಟುಕೊಂಡಿದ್ದಾರೋ ಅಥವಾ ತಾವು 60ರ ನಿಯಮಾವಳಿಗಳ ಪ್ರಕಾರ ತಾವು ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದ್ದೀರೋ ಅದು ನನಗೆ ಗೊತ್ತಿಲ್ಲ. ಒಪ್ಪಿಗೆ ಕೊಡದೇ ಇದ್ದರೆ ತಾವು ಇದರ ವಿಚಾರಗಳನ್ನು ಬಿಟ್ಟು ಸಾರ್ವಜನಿಕ ಮಹತ್ವದಾಗಿದ್ದು ಮತ್ತು ಇತ್ತೀಚೆಗೆ ನಡೆದಿರತಕ್ಕಂಥ ಗಲಭೆ ಆಗಿರತಕ್ಕದ್ದು, ಇಂತಹ ವಿಚಾರಗಳನ್ನು ಮಾತ್ರ ನಿಲುವಳಿ ಸೂಚನೆ ಮೂಲಕ ತರಲಿಕ್ಕೆ ಸಾಧ್ಯತೆ ಇದೆ., ಆದ್ದರಿಂದ ಅವರು ಒಪ್ಪುವುದಾಗಿದ್ದರೆ ನಿಲುವಳಿ ಸೂಚನೆ ಬಿಟ್ಟು ತಾವು ಬೇರೊಂದು ರೂಪದಲ್ಲಿ ಚರ್ಚೆಗೆ ಅವಕಾಶವನ್ನು ಕಲ್ಪಿಸಿ ಕೊಡುವುದಾದರೆ ನಾವು ಉತ್ತರ ಕೊಡಲು ತಯಾರಿದ್ದೇವೆ. ಆದರೆ ನಿಲುವಳಿ ಸೂಚನೆಯಲ್ಲಿ ಪ್ರಾರಂಭಿಕವಾಗಿ ತಮ್ಮ ಮನ ಒಲಿಸುವುದಾಗಿದ್ದರೆ ಇದನ್ನು ತಾವು ಒಪ್ಪದೇ ಇರಬೇಕು. ಅದನ್ನು ತಿರಸ್ಕರಿಸಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ 60ನೇ ನಿಯಮ ಇದು ಸಂಪೂರ್ಣವಾಗಿ ಒಂದು ಉಪವೇಶನದಲ್ಲಿ ಯಾವ್ಯಾವುದು ಇರಬೇಕು? ಈಗಾಗಲೇ ಪುನಃ ಚರ್ಚೆಗೆ ನಿಲುವಳಿ ಸೂಚನೆ ಇರತಕ್ಕದ್ದಲ್ಲ. ಈ ಬಗ್ಗೆ ಆಗಲೇ ಹಿಂದೆ ಚರ್ಚೆ ಆಗಿರತಕ್ಕಂಥಹದ್ದು. ಅದು ಇತ್ತೀಚೆಗೆ ಆದಂತಹ ಘಟನೆಯೇ ಆಗಿರಬೇಕು. ಇಷ್ಟು ಇದ್ದಾಗ ಮಾತ್ರ ನಿಲುವಳಿ ಸೂಚನೆ ರೂಪದಲ್ಲಿ ಇದನ್ನು ತರಲಿಕ್ಕೆ ಸಾಧ್ಯ ಇದೆ. ಆ ಕಾರಣಕ್ಕಾಗಿ ತಮ್ಮ ಮನ ಒಲಿಸಿ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಇಲ್ಲ ಒಪ್ಪಿಗೆ ಕೊಟ್ಟಿಲ್ಲ. ಆದ್ದರಿಂದ ಈ ಹಂತದಲ್ಲೇ ನಾನು ಮಾನ್ಯ

ವಿರೋಧ ಪಕ್ಷ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಚರ್ಚೆ ಮಾಡಿ ಈ ವಿಷಯದ ಮೇಲೆ ಬೆಳಕು ಚೆಲ್ಲಬೇಕು ಎನ್ನುವುದೇ ಬಹಳ ಮುಖ್ಯ ಉದ್ದೇಶ ಆಗಿರುವುದರಿಂದ ಯಾವುದಾದರೂ ರೂಪದಲ್ಲಿ ಚರ್ಚೆಗೆ ತಾವು ಇದನ್ನು ತೆಗೆದುಕೊಂಡರೆ ನಾವು ಉತ್ತರ ಕೊಡಲಿಕ್ಕೆ ತಯಾರಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇತ್ತೀಚೆಗೆ ನಡೆದಂತಹ ಘಟನೆಗಳೂ ಇವೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರೇನು ಕನ್‌ವಿನ್ಸ್ ಮಾಡಲಿಕ್ಕೆ ತಯಾರಿದ್ದರು. ಅವರಿಗೆ ಬಿಡಬೇಕಾಗಿತ್ತು. ಅವರು ಬಹಳ ಗಹನವಾದಂತಹ ವಿಷಯಗಳನ್ನು ಎತ್ತುವವರು ಇದ್ದರು ಎಂದು ನಾನು ತಿಳಿದುಕೊಂಡು ಈ ಮಧ್ಯೆ ಭೂಮಿ ಕಬಳಿಕೆ, ಭೂಮಿ ಕಬಳಿಕೆ ಮುಖಾಂತರ ಬಿಲ್ಡಿಂಗ್‌ಗಳನ್ನು ಕಟ್ಟುವುದು. ಅದರ ಪೊಸೆಷನ್ ತೆಗೆದುಕೊಳ್ಳುವುದು. ಬೆಂಗಳೂರಿನಲ್ಲಿ ಅಗಾಧವಾಗಿ ಹೆಚ್ಚಾಗಿ ಬಿಟ್ಟಿದೆ. ತಮಗೆ ಗೊತ್ತು, ಕೆಂಪೇಗೌಡ ಮಹಾರಾಜ ಕಾರ್ ಪಾರ್ಕ್ ಕಾಂಪ್ಲೆಕ್ಸ್ ಒಂದಾಯಿತು. ಅದನ್ನು ನಾವು ಇವತ್ತು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಎರಡನೆಯದು ಬೆಂಗಳೂರಿನಲ್ಲಿ ಸೆಂಟ್ರಲ್ ವರ್ಕ್ ಶಾಪ್, ಸ್ಟೋರ್ಸ್ ಇತ್ತು. ಅದು ಮಹಾನಗರ ಪಾಲಿಕೆಯದು ಮೆಗ್ರಾತ್ ರೋಡ್‌ನಲ್ಲಿ ಇತ್ತು. ಅದರ ವಿಚಾರ ಕೂಡ ನಾವು ಇವತ್ತು ಪ್ರಸ್ತಾಪ ಮಾಡಬೇಕಾಗಿದೆ. ಚಿಕ್ಕಪೇಟೆಯಲ್ಲಿ ಶಾಲೆ ಇತ್ತು. ಅದನ್ನು ಒಡೆದು ಬಿಟ್ಟು ಕಾಂಪ್ಲೆಕ್ಸ್ ಮಾಡುತ್ತಿದ್ದಾರೆ. ಅದನ್ನೂ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಎಲ್ಲೆಲ್ಲಿ ಪಾರ್ಕುಗಳು, ಹಾಸ್ಪಿಟಲ್‌ಗೆ ಮತ್ತೆ ಗ್ರೀನ್ ಬೆಲ್ಟ್‌ಗೆ ಸಿಡಿಪಿ ಪ್ಲಾನ್ ಪ್ರಕಾರ ರಿಸರ್ವ್ ಇತ್ತು. ಅದೆಲ್ಲವನ್ನೂ ಬಿಎಂಐಸಿಪಿಎ ಮಾಡಿಕೊಂಡು ಕನ್ವರ್ಟ್ ಮಾಡಿ ಕಟ್ಟಡ ಮಾಡುತ್ತಿದ್ದಾರೆ. ಅದನ್ನೆಲ್ಲಾ ಇಲ್ಲಿ ತಕ್ಷಣ ಚರ್ಚೆ ಮಾಡದೇ ಹೋದರೆ ಬೆಂಗಳೂರು ನಗರ ಭೂಗಳ್ಳರ, ಕೊಳ್ಳೆ ಹೊಡೆಯುವರ ರಾಜಧಾನಿ ಆಗಿ ಬಿಡುತ್ತದೆ. ಇದು ಕರ್ನಾಟಕದ ರಾಜಕೀಯ ರಾಜಧಾನಿ ಆಗಿ ಉಳಿದುಕೊಳ್ಳುವುದಿಲ್ಲ. ನಾವು ಅಲ್ಲಿ ಚರ್ಚೆಗೆ ಬರಬೇಕಾಗಿದೆ. ತಾವು ಈ ಚರ್ಚೆಯನ್ನು ಅಡ್ಜರ್ನ್‌ಮೆಂಟ್ ವೇಷನ್ ರೂಪದಲ್ಲೇ ತೆಗೆದುಕೊಳ್ಳಬೇಕು. ಏಕೆಂದರೆ, ಬಹಳಷ್ಟು ಮಾಹಿತಿಗಳನ್ನು ನಾವು ಇಲ್ಲಿ ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು :– ಮಾನ್ಯ ಮಾಧುಸ್ವಾಮಿಯವರೇ, ನೀವೇ ಹಿಂದೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಬಹಳ ದೀರ್ಘವಾಗಿ ಚರ್ಚೆ ಆಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– I am very happy. ತಾವು ಪ್ರಸ್ತಾಪ ಮಾಡಿ.

ಅಧ್ಯಕ್ಷರು :– ದೀರ್ಘವಾಗಿ ಚರ್ಚೆ ಆಗಿದೆ. ಈಗ ಮಾನ್ಯ ವಿರೋಧ ಪಕ್ಷದವರು ಪ್ರಸ್ತಾಪ ಮಾಡಿದ್ದರಲ್ಲಿ ಬಹು ಹಳೆಯ ಮಾನ್ಯ ಸದಸ್ಯರುಗಳು ಏನು

ಪ್ರಸ್ತಾಪ ಮಾಡಿದ್ದಾರೆ. ಅದೇ ಆಗಿದ್ದಾವೆ. ಆ ಕಾರಣದಿಂದ.....

ಶ್ರೀ ವಾಟಾಳ್ ನಾಗರಾಜ್ :– ತಾವು ತೀರ್ಪು ಕೊಡುವ ಮುಂಚೆ ಒಂದು ವಿಚಾರ ಹೇಳಿ ಬಿಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಅವತ್ತು ಪ್ರಸ್ತಾಪ ಮಾಡಿರುವಂತಹ ಯಾವುದೇ ಒಂದು ವಸ್ತುವನ್ನು ಪ್ರಸ್ತಾಪ ಮಾಡುವಂತಹ ಅಗತ್ಯ ಇಲ್ಲ. ಸುಪ್ರೀಂಕೋರ್ಟ್ ಇವತ್ತು ನನ್ನ ವಾದವನ್ನು ಒಪ್ಪಿಕೊಂಡಿದ್ದೆ. ನಾನು ಇಲ್ಲಿ ಕಂಠ ಶೋಷಣೆ ಮಾಡಿಕೊಂಡು ವಿಫಲ ಆಗಿರಬಹುದು. ಮತ್ತೇನೋ ಇಲ್ಲಿ ಹೈಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಆದಾಗ ಬೇಕಾದಷ್ಟು ಮಾತನಾಡಿರಬಹುದು. I am very happy to say in this house ಒಂದೇ ಒಂದು ಇಂಚು ಪರಭಾರೆ ಮಾಡಬಾರದು ಎಂದು ಇವತ್ತು ರಾಷ್ಟ್ರದ ಅತ್ಯಂತ ಉಚ್ಚ ನ್ಯಾಯಾಲಯ ನಮಗೆ ತೀರ್ಪು ಕೊಟ್ಟಿದೆ.

ಶ್ರೀ ಎಂ.ಪಿ.ಪ್ರಕಾಶ್ :– Interim order has nothing to do with this particular thing.

ಶ್ರೀ ಜೆ.ಸಿ.ಮಾಧುಸ್ವಾಮಿ :– ಇರಲಿ. ನಾನು ಅದರ ಪ್ರಸ್ತಾಪಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :– ಇಂಟೀರಿಯಂ ಆರ್ಡರ್ ಆಗಿರತಕ್ಕದ್ದು ಮತ್ತು ಇದಕ್ಕೂ ಬಿಎಂಐಸಿಗೆ ಸಂಬಂಧ ಇಲ್ಲದಂತಹ ವಿಚಾರ. It has got nothing to do with this.

ಶ್ರೀ ಜೆ.ಸಿ.ಮಾಧುಸ್ವಾಮಿ :– ನಾನು ಬಿಎಂಐಸಿ ವಿಚಾರ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ :– ಬಿಎಂಐಸಿ ಬಗ್ಗೆ ಎಲ್ಲರೂ ಕೂಡ ಶಹಭಾಸ್‌ಗಿರಿ ತೆಗೆದುಕೊಂಡಿದೆ ಅದಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ :– ನಾನು ಕಾರಿಡಾರ್ ವಿಷಯ ಮಾತನಾಡಲು ನಿಂತಿಲ್ಲ ಇಲ್ಲಿ.

ಅಧ್ಯಕ್ಷರು :– ಮಾನ್ಯ ಮಾಧುಸ್ವಾಮಿ ಅವರೇ, ಭೂ ಕಬಳಿಕೆ ಬಗ್ಗೆ ಬಹಳಷ್ಟು ದೀರ್ಘ ಚರ್ಚೆ ಆಗಿದೆ. ಅನೇಕ ವಿಚಾರಗಳನ್ನು ಬೇರೆ ಬೇರೆ ಸದಸ್ಯರು ಹೇಳಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಅವು ಯಾವುದನ್ನು ಚರ್ಚೆ ಮಾಡಲಿಕ್ಕೆ ನಾವು ಇಲ್ಲಿ ನಿಂತಿಲ್ಲ.

ಅಧ್ಯಕ್ಷರು :– ಆಗಿರತಕ್ಕ ವಿಚಾರದ ಬಗ್ಗೆ ನನ್ನ ಮನವೊಲಿಸಲಿಕ್ಕೆ

ಯಾವುದೋ ಒಂದು ವಿಚಾರ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಸಾರ್ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು :– ಒಂದು ಅಥವಾ ಎರಡು ವಿಚಾರ ಹೇಳಿ. ಅದು ಬಿಟ್ಟು ಮತ್ತೆ ಏನು ಬೇರೆ ವಿಚಾರ ಹೇಳುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ :– ನಾನು ಹೇಳಲಿಲ್ಲ. ನೀವು ಹೇಳಿದಿರಿ.

ಅಧ್ಯಕ್ಷರು :– ಆ ತರಹ ಆಗುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ :– ಸಾರ್, ನಾನು ಬಿಎಂಐಪಿಪಿಯನ್ನು ಮುಟ್ಟಲೇ ಇಲ್ಲ. ನಾನು ಈಗ ಹೋಟೆಲ್ ಏಟ್ರಿಯಾವನ್ನು ಮುಟ್ಟುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :– ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಯಾವುದಲ್ಲೆ ಸಂಬಂಧಪಟ್ಟ ಹಾಗೆ ಕೊಟ್ಟಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ :– ಅಧ್ಯಕ್ಷರು ನೀವು ಹೇಳುವ ಹೊತ್ತಿಗೆ ನಾನು ಹೇಳಿದೆ.

ಶ್ರೀ ಎಂ.ಪಿ.ಪ್ರಕಾಶ್ :– ಬಿಎಂಐಸಿಪಿ ಎಂದರೆ ಯಾವುದಕ್ಕೆ ಸಂಬಂಧಪಟ್ಟಿದ್ದು?

ಶ್ರೀ ಜೆ.ಸಿ.ಮಾಧುಸ್ವಾಮಿ :– ಸ್ವಲ್ಪ ದಯಮಾಡಿ ಕೇಳುವಷ್ಟು ಸಮಾಧಾನದಿಂದ ಇರಿ. ಅಧ್ಯಕ್ಷರೆ, ಇದನ್ನು ಬಗೆಹರಿಸಿದರು. ಅಧ್ಯಕ್ಷರು ಹೆಸರಿಸುವ ಹೊತ್ತಿಗೆ ನಾನು ಮಾತನಾಡಿದೆ.

ಶ್ರೀ ಎಂ.ಪಿ.ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ಹಿರಿಯರಾದಂತಹ ಸದಸ್ಯರು ಹೇಳುತ್ತಿದ್ದಾರೆ. ಈಗ ಇರುವ ಪ್ರಶ್ನೆ ಇಷ್ಟೇ. 60ರ ನಿಯಮಾವಳಿಗಳ ಪ್ರಕಾರ ತಮ್ಮ ಮನವೊಲಿಸಲಿಕ್ಕೆ ಬೇಕಾಗಿರತಕ್ಕ ಮಾಹಿತಿಯನ್ನು ಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್ :– ಅಲ್ಲಿರತಕ್ಕಂಥಾದ್ದು ಏನಿದೆ, ನಿರ್ಬಂಧಗಳಿವೆ, 69 ಅನ್ನು ಯಾವ ರೀತಿ ಉಪಯೋಗಿಸಬೇಕು?

ಶ್ರೀ ಜೆ.ಸಿ.ಮಾಧುಸ್ವಾಮಿ : ನಮಗೆ ತಾವು allow ಮಾಡುವುದಕ್ಕೆ ಬಿಡಬೇಕಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಅದಕ್ಕಾಗಿಯೇ ತಾವು ಅವರ ಮನವೊಲಿಸುವ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಆಗಿರಬೇಕು. ಆ ಇತ್ತೀಚಿನ ಘಟನೆಗಳು ಯಾವುದು ಅನ್ನುವುದರ ಬಗ್ಗೆ ಅವರ ಮನವೊಲಿಸಿರಿ. ಈಗ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿದೆ. I am very happy. Yes, we are also happy. ಯಾರು ಇಲ್ಲವೆನ್ನುತ್ತಾರೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ನಾನು ಹಾಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಬಿಎಂಐಸಿ ವಿಚಾರಕ್ಕೇ ತಾವು ಅದನ್ನು ಪ್ರಸ್ತಾಪ

ಮಾಡಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನನ್ನನ್ನು ಕ್ಷಮಿಸಬೇಕು. ನಾನು ಆ ವಿಷಯವನ್ನು ಪ್ರಸ್ತಾಪ ಮಾಡುವುದೂ ಇಲ್ಲ, ಮಾಡುವುದಕ್ಕೆ ಕೊಟ್ಟಿಲ್ಲ. ಅಧ್ಯಕ್ಷರ ಬಾಯಿಂದ ಬಂತು, ನೀವು ಅದನ್ನು ಪ್ರಸ್ತಾಪ ಮಾಡಿದ್ದೀರಿ ಎನ್ನುವುದಕ್ಕೆ ಅದೊಂದು ತೀರ್ಮಾನ ಎಂಟ್ರಿ ಮಾಡಲಾಗಿದೆ. ನನಗೆ ಅದನ್ನು ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ನನಗೆ ಸಮಾಧಾನವಾಗಿದೆ ಎಂದು ಅಷ್ಟು ಹೇಳಿದ್ದೇನೆ. ನಾವು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಅದಾದ ನಂತರ, ಕಾನೂನಿಗೆ ಅಮೆಂಡ್‌ಮೆಂಟ್ ತೆಗೆದುಕೊಂಡು ಬಂದು ಗ್ರಾಮಠಾಣಾ ಜಮೀನನ್ನು ಸರ್ವೆ ಮಾಡಿಸುವುದನ್ನು ಸರ್ಕಾರ ತಡೆದಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಸಾರ್, ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೈದು ನಿಮಿಷಗಳಲ್ಲಿ ನಾನು ಪ್ರಿಲಿಮಿನರಿ ಸಬ್‌ಮಿಷನ್ ಅನ್ನು ಮುಗಿಸುತ್ತೇನೆ. ಅದಾದ ನಂತರ ಮಾಧುಸ್ವಾಮಿಯವರು, ಉಳಿದಂತಹವರೆಲ್ಲರೂ ಮಾತನಾಡುವವರಿದ್ದಾರೆ. ಸನ್ಮಾನ್ಯ ಎಂ.ಪಿ.ಪ್ರಕಾಶ್‌ರವರು ಕಾಯಿದೆ ಪುಸ್ತಕ ಹಿಡಿದುಕೊಂಡು ಕಾನೂನಿನಡಿಯಲ್ಲಿ ಕಾರ್ಯಕಲಾಪ ನಡೆಯಬೇಕೆಂಬುದರಲ್ಲಿ ನಮ್ಮದೇನೂ ಅಭ್ಯಂತರವಿಲ್ಲ. ಇವೊತ್ತು ಇಲ್ಲಿ ಉದ್ಭವವಾಗಿರುವಂಥಾದ್ದು, ಎಂ.ಪಿ.ಪ್ರಕಾಶ್‌ರವರು ಕಂದಾಯ ಸಚಿವರಾಗಿ ಈ ಭೂ ಹಗರಣದಲ್ಲಿ ಎಲ್ಲಾ ರಾಜಕೀಯ ಪಕ್ಷದ ಮುಖಂಡರು ಶಾಮೀಲಾಗಿದ್ದಾರೆಂದು ಒಂದು ಕಡೆ ಹೇಳಿ, ಇನ್ನೊಂದು ಕಡೆ 33 ಸಾವಿರ ಭೂ ಕಬಳಿಕೆಯಾಗಿರುವುದು ನಿಜ ಎಂದು ಹೇಳಿ, ಮತ್ತೊಂದು ಕಡೆ ಈ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಹೋದರೆ ರಾಜಕೀಯವಾಗಿ ಪ್ರಭಾವಿ ಇರುವಂಥ ಜನರು ತಡೆಯುತ್ತಾರೆಂದು ಸಾರ್ವಜನಿಕವಾಗಿ ನಿಮ್ಮ ಕೈಕಟ್ಟಿದೆ ಎನ್ನುವುದಾದರೆ, ಬಹುಶಃ ನೀವು ಇವೊತ್ತು ಯಾವುದೋ ಒಂದು ಕಾಣದ ಕೈಯು ಕಪಿಮುಷ್ಠಿಯಲ್ಲಿ ಸಿಲುಕಿಕೊಂಡು ನಿಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗುತ್ತಿಲ್ಲ. ಇದು ನನ್ನ ಆರೋಪ. ಎರಡನೆಯದು, ಈಗ ಭೂ ಕಬಳಿಕೆ ಬಗ್ಗೆ ಆಯಿತು. ಇನ್ನು ಒಂದೇ ಒಂದು, ಈ ಹಸಿರು ವಲಯಕ್ಕೆ ಕತ್ತರಿ ಹಾಕುವುದಕ್ಕೆ ಹೊರಟಿದ್ದೀರಿ. ಇವೊತ್ತು ಸನ್ಮಾನ್ಯ ಅಧ್ಯಕ್ಷರೆ, 1995ರಂತೆ ಹಸಿರು ವಲಯ 742 ಚದರ ಕಿಲೋಮೀಟರ್ ಇದ್ದುದು. ಹಾಲಿ ಪ್ರಸ್ತಾಪಿಸಿರುವುದು 494 ಚದರ ಕಿಲೋಮೀಟರ್. ಅಂದರೆ, ಕಡಿಮೆಯಾಗಿರುವುದು 248 ಚದರ ಕಿಲೋಮೀಟರ್. ಯಾಕೆ? ಇದರಲ್ಲಿ ಈ ಭೂ ಕಬಳಿಕೆ ಮಾಡಿರುವಂಥ ನೂರಾರು ಜನರು ಈಗಾಗಲೇ ನೂರು ಎಕರೆ ಜಮೀನನ್ನು ಕಬಳಿಸಿದ್ದಾರೆ. ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ಗ್ರೀನ್ ಬೆಲ್ಟ್‌ನಲ್ಲಿ ಯಾರೋ ಒಬ್ಬ

ಫ್ರೆಂಚ್ ಕಂಪನಿಯವನಿಗೆ ಕನ್ಸಿಷನ್ ಕೊಡುವುದಕ್ಕೆ ಹೊರಟಿದ್ದೀರಿ. ಆ ಭೂಗಳ್ಳರ ವಶದಲ್ಲಿರುವ ಜಮೀನನ್ನು ಅವನಿಗೆ ಕೊಡುವಂಥ ದುರುದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಹಸಿರು ವಲಯವನ್ನು ನಾವು ಕಾಪಾಡಿಕೊಂಡು ಬರುತ್ತಿದ್ದೇವೆ. ಬೆಂಗಳೂರು ಅಭಿವೃದ್ಧಿಯಲ್ಲೂ ನೀವು ಅದಕ್ಕೂ ಕೈಹಾಕುವಂಥ ಪ್ರಯತ್ನ ಮಾಡಿದ್ದೀರಿ. ನೀವು ಅಧಿಕಾರ ಬಿಟ್ಟು ಹೋಗುವುದರೊಳಗಾಗಿ ಬೆಂಗಳೂರು ಸುತ್ತಮುತ್ತ ಹಸಿರು ವಲಯ ಇರಬಹುದು, ಮತ್ತೊಂದು ಇರಬಹುದು. ಒಂದು ಗುಂಟೆ ಜಮೀನೂ ಇಲ್ಲದೆ ಪೂರ್ತಿ ಪರಭಾರೆ ಮಾಡುವಂಥ ವ್ಯವಸ್ಥಿತವಾದ ಸಂಚು ನಡೆಯುತ್ತಿದೆ ಎನ್ನುವಂಥಾದ್ದು ನನ್ನ ನೇರವಾದ ಆರೋಪ. ಇವೊತ್ತು ಒಂದೆರಡಲ್ಲ. ಅನೇಕ ರೀತಿಯ ಉದಾಹರಣೆಗಳನ್ನು ನಾನು ನಿಮಗೆ ಕೊಡಬಲ್ಲೆ. ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಇಲ್ಲಿ ನನ್ನ ಹತ್ತಿರ ಕೆಲವು ಮಾಹಿತಿಗಳಿವೆ. ನಿಮಗೆ ನಾನು ಒಂದೊಂದೇ ಉದಾಹರಣೆಗಳನ್ನು ಕೊಡುತ್ತೇನೆ. ಬಿಡದಿ ಸಮೀಪ ಈಗಲ್‌ಟನ್ ರಿಸಾರ್ಟ್‌ಗೆ ಸಂಬಂಧಿಸಿದಂತೆ 200 ಎಕರೆಯಷ್ಟು ಅನಧಿಕೃತ ಒತ್ತುವರಿಯನ್ನು ಸಕ್ರಮಗೊಳಿಸಿದಿರಿ. ಸುಮಾರು 150 ಎಕರೆ ಗೋಮಾಳವನ್ನು ಈಗಲ್‌ಟನ್ ರಿಸಾರ್ಟ್ ವಶಪಡಿಸಿಕೊಂಡಿದೆ. 15 ವರ್ಷಗಳ ಕಾಲ ಈ ಜಮೀನನ್ನು ಪರಭಾರೆ ಮಾಡಬಾರದೆಂಬ ಷರತ್ತು ಇದ್ದರೂ ಅದನ್ನು ಉಲ್ಲಂಘನೆ ಮಾಡಿ ಅವರಿಗೆ ಸಹಾಯ ಮಾಡಿದಿರಿ. ಯಾರು? ನೀವೇ ಅಧಿಕಾರದಲ್ಲಿದ್ದಾಗ. ಆ ಪಾಪಕ್ಕೆ ಹೊಣೆ ನೀವೇನೇ. ಈ ಸದನದಲ್ಲಿ ನಾನು ಅದನ್ನು ಪ್ರಸ್ತಾಪ ಮಾಡಿದ್ದೆ. ಇವತ್ತೊ ಜೆಡಿ(ಎಸ್)ನ ಮುಖಂಡರು ಭೂ ಕಬಳಿಕೆ ಮಾಡಿದವರನ್ನು ಜೈಲಿಗೆ ಕಳುಹಿಸುತ್ತೇವೆಂದು ಮಾತನಾಡುತ್ತೀರಾ, ಅದರಲ್ಲಿ ನಿಮ್ಮ ಪಾಲು ಎಷ್ಟೆಂಬುದು ಇವೊತ್ತು ತೀರ್ಮಾನವಾಗಬೇಕಾಗಿದೆ. ಈ ಭೂ ಕಬಳಿಕೆ ಬಹಳ ದೊಡ್ಡ ಪ್ರಮಾಣದಲ್ಲಿ ಪ್ರಾರಂಭವಾದಂಥಾದ್ದು. ಈಗಲ್‌ಟನ್ ರಿಸಾರ್ಟ್‌ನ ವ್ಯವಹಾರ ಇರಬಹುದು, ಈ ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿ ತಂದು ಯಾರು ಎಷ್ಟು ಬೇಕಾದರೂ ಜಮೀನನ್ನು ಕೊಳ್ಳಬಹುದು ಎನ್ನುವಂಥ ಕಾನೂನನ್ನು ತಿದ್ದುಪಡಿ ಮಾಡಿದಂಥ ಪಾಪಕ್ಕೆ ಪ್ರಾಯಶ್ಚಿತ್ತ ನೀವು ಮಾಡಿಕೊಳ್ಳಬೇಕಾಗಿದೆ. ಅದು ನಿಮ್ಮ ಕಾಲದಲ್ಲಿ ಪ್ರಾರಂಭವಾಯಿತು. ಸ್ವಾಮಿ, ಯಾವಾಗ ನೀವು ಅಧಿಕಾರದಲ್ಲಿದ್ದಿರಿ. ಆಗ ಭೂ ಸುಧಾರಣೆ ಕಾಯಿದೆಗೆ ನೀವು ತಿದ್ದುಪಡಿ ತಂದಿರಿ.

ಶ್ರೀ ಎಂ.ಪಿ.ಪ್ರಕಾಶ್ : ನಿಮ್ಮ ಕಾಲದಲ್ಲಿ ಪ್ರಾರಂಭವಾಗಿದೆಯೆಂದರೆ, ಭೂ ಕಬಳಿಕೆ ನಮ್ಮ ಕಾಲದಲ್ಲಿ ಪ್ರಾರಂಭವಾಯಿತೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು, ನಿಮ್ಮ ಕಾಲದಲ್ಲೇ ಈಗಲ್‌ಟನ್

ರಿಸಾರ್ಟ್ ಪ್ರಾರಂಭವಾದದ್ದು.

ಶ್ರೀ ಎಂ.ಪಿ.ಪ್ರಕಾಶ್ : ಇದು ನಮ್ಮ ಕಾಲದಲ್ಲೇ ಆಗಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು.

ಶ್ರೀ ಎಂ.ಪಿ.ಪ್ರಕಾಶ್ : ಆಯಿತು, ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಅದನ್ನು ಉಪಯೋಗಿಸಬೇಕಾದರೆ ತಾವು ಸ್ವಲ್ಪ ನಿಯಂತ್ರಣ ಇಟ್ಟುಕೊಳ್ಳಬೇಕು. ... ಅದಲ್ಲ, ಅದರಾಚೆಗೂ ಕೂಡ ನಡೆದಿರತಕ್ಕಂಥಾದ್ದು ಇದೆ. ಭೂ ಕಬಳಿಕೆ ಬೇಕಾದಷ್ಟಿದೆ. ನೋಡಿ, ಸನ್ಮಾನ್ಯ ಸಭಾಧ್ಯಕ್ಷರೆ, ಮೊದಲು ಇದು ಇತ್ತೀಚೆಗೆ recent occurrence ಆಗಿದೆ. Adjournment Motion has to be used very sparingly. It is last weapon to be used. ಇದಕ್ಕೆ ಬೇಕಾಗಿರತಕ್ಕಂಥ ಮಾಹಿತಿಯನ್ನು ಹೇಳಲಿ. As persions cannot be thrown open to the Goverment and all that. ನೀವು ಹೀಗೆ ಮಾಡಿದಿರಿ, ಹಾಗೆ ಮಾಡಿದಿರಿ ಎನ್ನತಕ್ಕಂಥಾದ್ದು ಅದು merit of the case.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಹೇಗೆ ಆರೋಪ ಮಾಡಿದಿರಿ? ತಾವು ಕಂದಾಯ ಸಚಿವರಾಗಿ ಈ ಭೂ ಕಬಳಿಕೆಯಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆಂದು ಹೇಗೆ ಆರೋಪ ಮಾಡಿದಿರಿ?

ಶ್ರೀ ಎಂ.ಪಿ.ಪ್ರಕಾಶ್: ಹಾಗಲ್ಲ. ತಾವು ಹಿರಿಯರಿದ್ದೀರಿ, ವಿರೋಧ ಪಕ್ಷದ ನಾಯಕರಾಗಿದ್ದೀರಿ. ತಮಗೆ ಅದನ್ನು ಒಪ್ಪಿಗೆ ಕೊಟ್ಟ ಮೇಲೆ ತಾವು ಏನು ಹೇಳಬೇಕೋ ಅದೆಲ್ಲವನ್ನೂ ನನ್ನ ಮೇಲೆ ಹೇಳಿ. ಆದರೆ, ಮೊದಲು ತಾವು ಸೀಮಿತವಾಗಬೇಕು. ತಾವು ಅವರ ಮನವೊಲಿಸಬೇಕು. ಅವರು ಅದನ್ನು adjournment motion ಆಗಿ ತೆಗೆದುಕೊಳ್ಳಲು ಒಪ್ಪಿದ್ದಾರೆಂದ ಬಳಿಕ ನಾವು ಚರ್ಚೆ ಮಾಡೋಣ.

ಅಧ್ಯಕ್ಷರು : ಈಗ ಬೇಗ ಮುಗಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾರ್, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದೇ ಇಲ್ಲ.

ಅಧ್ಯಕ್ಷರು : ಅಡ್ಜರ್ನ್‌ಮೆಂಟ್ ಮೋಷನ್‌ಗೆ ಬಹಳಷ್ಟು ಜನರು ಸಹಿ ಮಾಡಿದ್ದಾರೆ. ಅವರೆಲ್ಲರೂ ಕೂಡ ಸಿಗ್ನೇಟರಿ ಆಗಿರುವುದರಿಂದ ಮಾತನಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇನ್ನು ಮೂರ್ನಾಲ್ಕು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಸಾರ್, ಈಗ ಹಗರಣದಲ್ಲಿ ಯಾವ್ಯಾವ ತರಹ ಇದೆಯೆಂದರೆ, ಈಗ ಗವರ್ನಮೆಂಟ್ ಲ್ಯಾಂಡ್ ಅನ್ನು ಯಾವುದಾದರೂ ಕಾಲಕ್ಕೆ ಅಥವಾ ಬೇರಾವುದೇ ಜಮೀನನ್ನು ಕನ್ವರ್ಷನ್ ಮಾಡುವಂಥ ಕಾಲದಲ್ಲಿ

ಸನ್ಮಾನ್ಯ ಸಚಿವರೆ, ಎ-ಖರಾಬು ಎಂದು ಯಾವುದು ಇರುತ್ತದೆ, ಅದಕ್ಕೆ ಲ್ಯಾಂಡ್ ವ್ಯಾಲ್ಯೂ ಕಟ್ಟಿಸಿಕೊಂಡು ಕನ್ವರ್ಷನ್ ಮಾಡಬೇಕೆಂದು ಇವೊತ್ತು ಕಾನೂನು ಇದೆ. ನಿಮಗೆ ನಾನು ಒಂದೇ ಒಂದು ಸ್ಯಾಂಪಲ್ ಕೊಡುತ್ತೇನೆ. ರಾಮನಗರ ತಾಲ್ಲೂಕು ಬಾನಂದೂರು ಸರ್ವೆ ನಂಬರ್ 94:1 ಒಂದು ಗುಂಟೆ ಜಮೀನು. ಅದೇ ಬಾನಂದೂರು ಸರ್ವೆ ನಂಬರ್ 94:2 ನಾಲ್ಕು ಗುಂಟೆ ಜಮೀನು ಮತ್ತು ರಾಮನಗರದ ಪಕ್ಕದಲ್ಲಿರುವಂತಹ ಬಿಳಿಕೆಂಪನಹಳ್ಳಿ ಸರ್ವೆ ನಂಬರ್ 27:3 ಐದು ಗುಂಟೆ ಜಮೀನು. ಈ 13 ಗುಂಟೆ ಎ-ಖರಾಬು ಕನ್ವರ್ಷನ್ ಆಗಿದೆ. ಆದರೆ, ನೀವು ಲ್ಯಾಂಡ್ ವ್ಯಾಲ್ಯೂ ಏನು ವಸೂಲು ಮಾಡಬೇಕಾಗಿತ್ತು ಅದನ್ನು ವಸೂಲು ಮಾಡಲಿಲ್ಲ. ರಾಜ್‌ಕುಮಾರ್ ಎಸ್ಟೇಟ್ ಇದೆ. ಶೇಷಗಿರಿಹಳ್ಳಿಯಲ್ಲಿ ಸರ್ವೆ ನಂಬರ್ 77, 99 ಎಕರೆ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ, ಬೇಲಿ ಹಾಕಿಕೊಂಡಿದ್ದಾರೆ. ನೀವು ಕಣ್ಮುಚ್ಚಿಕೊಂಡಿದ್ದೀರಿ. 99 ಎಕರೆ, ಇವತ್ತು ಅದೊಂದೇ ನೂರು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುತ್ತದೆ. ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಕಾಚನಾಯಕನಹಳ್ಳಿ ಸರ್ಕಾರಿ ಸರ್ವೆ ನಂಬರ್ 100, ಇಲ್ಲಿ ಗೋಮಾಳ 49 ಎಕರೆ. ಆ ಗೋಮಾಳದ ಪಕ್ಕದಲ್ಲಿ ಮೂರು ಎಕರೆ ವೀರರೆಡ್ಡಿ ಬಿನ್ ಪಾಪರೆಡ್ಡಿ ಎಂಬುವವರು ಒತ್ತುವರಿ ಮಾಡಿಕೊಂಡು 40x60 ಸೈಟ್ ಮಾಡಿಕೊಂಡು ಮಾರುತ್ತಿದ್ದಾರೆ. ಸುಮಾರು ಮೂರ್ನಾಲ್ಕು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುತ್ತದೆ. ಇದು ಈ ರೀತಿಯ ಒಂದು ಹಗರಣವಾದರೆ, ಬೆಂಗಳೂರಿನಲ್ಲಿ ನಾನು ನಮ್ಮ ಕಂದಾಯ ಸಚಿವರನ್ನು ಸಂಪರ್ಕ ಮಾಡಿದ್ದೆ. ಅನೇಕ ಕಾರಣಗಳಿಗೋಸ್ಕರ ನೀವು 30, 40, 50 ವರ್ಷಗಳಿಗೋಸ್ಕರ ಲೀಸ್ ಕೊಟ್ಟಿದ್ದೀರಿ. ಉದಾಹರಣೆಗೆ, ರಜತ ಎಂಟರ್‌ಪ್ರೈಸಸ್ ಚಿಕ್ಕಪೇಟೆಯಲ್ಲಿ ಒಂದಿದೆ. ರಜತ ಜ್ಯುವೆಲರಿಯ ಮಾಲೀಕರು ಶಿವಕುಮಾರ್ ಎನ್ನುವಂತಹವರ ಹೆಸರಿನಲ್ಲಿದೆ. ಅದೇ ರೀತಿ ಶಿವ ಇಂಟರ್‌ನ್ಯಾಷನಲ್ ಶೇಷಾದ್ರಿಪುರಂನಲ್ಲಿ, ಶಿವ ಹೋಟೆಲ್ ಉಪ್ಪಾರಪೇಟೆ ಪೊಲೀಸ್ ಸ್ಟೇಷನ್ ಹಿಂಭಾಗದಲ್ಲಿದೆ. ಇವರೆಲ್ಲಾ ಲೀಸ್‌ಗೆ ಜಾಗವನ್ನು ಪಡೆದು ಸುಮಾರು 8-10 ಲಕ್ಷ ರೂಪಾಯಿಗಳು ತಿಂಗಳಿಗೆ ಸಂಗ್ರಹವಾಗುತ್ತಿದೆ. ಆದರೆ, ನಿಮಗೆ ತಿಂಗಳಿಗೆ 25 ಸಾವಿರ ರೂಪಾಯಿಗಳನ್ನೂ ಕೊಡುತ್ತಿಲ್ಲ. ಆ ಅವಧಿ ಮುಗಿದ ಮೇಲೆ ನಾನು ನಮ್ಮ ರೆವಿನ್ಯೂ ಸಚಿವರು ಉತ್ತರ ಕೊಡುವಾಗ ಹೇಳಬೇಕು. ಇವೊತ್ತು ಬೆಂಗಳೂರು ಮಹಾನಗರ ಸುತ್ತಮುತ್ತ ಅದು ಕಾರ್ಪೊರೇಷನ್‌ಗೆ ಸಂಬಂಧಪಟ್ಟಿದ್ದಾಗಿರಬಹುದು. ಸರ್ಕಾರಕ್ಕೆ ಸಂಬಂಧಪಟ್ಟಿದ್ದಾಗಿರಬಹುದು. ಸುಮಾರು ನೂರು ಪ್ರಕರಣಗಳಲ್ಲಿ ನೀವು ಲೀಸ್ ಕೊಟ್ಟಿರುವಂಥಾದ್ದು ಅವಧಿ ಮುಗಿದಿದೆ. ಅವರನ್ನೇ ವಿಸ್ತರಣೆ ಮಾಡಿಕೊಂಡು ಹೋಗುತ್ತಿದ್ದೀರಿ. ಅವರುಗಳಿಗೇ

ಅದನ್ನು ಎಂಟ್ರಸ್ಟ್ ಮಾಡುತ್ತಿದ್ದೀರಿ. ಬಂದವರ್‍ಯಾರೋ ಕಂಡು ಭೇಟಿ ಮಾಡಿ ಸರಿ ಮಾಡಿಕೊಂಡು ಹೋದರೆ.... ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವ ವ್ಯವಹಾರವಾಗಿದೆ. ಇವೊತ್ತು ಅವೆಲ್ಲವನ್ನೂ ಸರ್ಕಾರ ಲೀಸ್ ಪಿರೇಡ್ ಮುಗಿದ ಬಳಿಕ ವಶಪಡಿಸಿಕೊಂಡರೆ, ಅದೊಂದು ಸುಮಾರು 8–10 ಸಾವಿರ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುತ್ತದೆ. ಈ ರೀತಿ ಅನೇಕ ಹಗರಣಗಳು ಇವೊತ್ತು ನಡೆದಿದೆ. ನಾವು ಬಹಳ ದಿವಸಗಳಿಂದಲೂ ಚರ್ಚೆ ಮಾಡುತ್ತಿದ್ದೇವೆ. ಬೆಂಗಳೂರು ಸುತ್ತಮುತ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ಬಿಡದಿ ಹೋಬಳಿ ವಾಜರಹಳ್ಳಿ ಮತ್ತು ಬನ್ನಿಕುಪ್ಪೆ ಗ್ರಾಮದಲ್ಲಿ 91 ಎಕರೆ 30 ಗುಂಟೆ ಇದೆ. ಅದರಲ್ಲಿ 81 ಎಕರೆ 31 ಗುಂಟೆಯನ್ನು ಕೆಐಎಡಿಬಿ ಮುಖಾಂತರ ಮಂಜೂರು ಮಾಡಿಸಿಕೊಂಡಿದ್ದಾರೆ. ಮತ್ತು ಈ ಜಮೀನಿನಲ್ಲಿ 10 ಎಕರೆಗೂ ಹೆಚ್ಚು ಖರಾಬು ಜಮೀನಿದ್ದು, ಇದನ್ನು ಒತ್ತುವರಿ ಮಾಡಿ ಕಾಂಪೌಂಡ್ ಹಾಕಿಕೊಂಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ವಾಜನಳ್ಳಿ ಮತ್ತು ಬನ್ನಿಕೊಪ್ಪೆ 91 ಎಕರೆ 30 ಗುಂಟೆ ಇದೆ. ಅದರಲ್ಲಿ 81 ಎಕರೆ 30 ಗುಂಟೆಯನ್ನು ಕೆ.ಎ.ಐ.ಡಿ ಮೂಲಕ ಮಂಜೂರು ಮಾಡಿಸಿಕೊಂಡಿದ್ದಾರೆ. ಈ ಜಮೀನಿನಲ್ಲಿ ಹತ್ತು ಎಕರೆಗೂ ಹೆಚ್ಚು ಜಮೀನು ಇದ್ದು ಇದನ್ನು ಒತ್ತುವರಿ ಮಾಡಿ ಕಾಂಪೌಂಡ್ ಹಾಕಿಕೊಂಡಿದ್ದಾರೆ. ಬೆಂಗಳೂರು ಗ್ರಾಮಾಂತರ ರಾಮನಗರ ತಾಲ್ಲೂಕು ಬಿಡದಿ ಹೋಬಳಿಯಲ್ಲಿ ಕೇತನಹಳ್ಳಿ ಸರ್ಕಾರಿ ಸರ್ವೆ ನಂಬರ್ 8, 9, 10, 16 ಮತ್ತು 17 ರಲ್ಲಿ ಅತಿಕ್ರಮಣ ಮಾಡಿ ಸುಮಾರು 16 ಎಕರೆ ಕಾಂಪೌಂಡ್ ಹಾಕಿಕೊಂಡಿದ್ದಾರೆ. ಈ ರೀತಿ ಸುಮಾರು ನೂರು ಉದಾಹರಣೆ ನನ್ನ ಹತ್ತಿರ ಇದೆ, ಬೆಂಗಳೂರು ಸುತ್ತಮುತ್ತ ಈ ಭೂ ಹಗರಣಕ್ಕೆ ಭೂ ಮಾಫಿಯಾ ಜೊತೆ ಈ ಸರ್ಕಾರವೆ ಕೈಜೋಡಿಸಿದೆಯೆಂದು ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಅದಕ್ಕಾಗಿ ದಯಮಾಡಿ, ವಿವರ ಅನೇಕ ಇದೆ, ಅದನ್ನು ಚರ್ಚೆ ಮಾಡಲು ನೀವು ಅವಕಾಶ ಮಾಡಿಕೊಡಬೇಕು ನಿಲುವಳಿ ಸೂಚನೆ ಮೂಲಕ. ಇದನ್ನು ಸಿ.ಬಿ.ಐ. ಗೆ ವಹಿಸಬೇಕು. ಯಾರಿಗೆ ನೀವು ಇವತ್ತು ರಕ್ಷಣೆ ಕೊಡುತ್ತಿದ್ದೀರಾ, ಏಕೆ ಇದುವರೆಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಯಾವ ಮಾಜಿ ಪ್ರಧಾನಿ ಸನ್ಮಾನ್ಯ ದೇವೇಗೌಡರ ಆಶೀರ್ವಾದದಿಂದ ಯಾರು ಇವತ್ತು ಕೆಲವರು ಆ ಪಕ್ಷದಿಂದ ಬಂದು ಇಲ್ಲಿ ಅಧಿಕಾರದಲ್ಲಿದ್ದೀರಾ, ಕಂದಾಯ ಸಚಿವರೆ, ಎಂ.ಪಿ.ಪ್ರಕಾಶ್‌ರವರೆ ಅಲ್ಲಿ ಅಧಿಕಾರದಲ್ಲಿರುವಾಗ ನೇರವಾಗಿ ಈ ರೀತಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಧೀಶರನ್ನು ನಾನು ಭೇಟಿ ಮಾಡುತ್ತೇನೆ, ರಾಷ್ಟ್ರಪತಿಗಳನ್ನು ಭೇಟಿ

ಮಾಡುತ್ತೇನೆ ಎನ್ನುವಂಥ ಆರೋಪವನ್ನು ಮಾಡಿದ ಮೇಲೆ ನೀವಲ್ಲಿ ಕಂದಾಯ ಸಚಿವರಾಗಿ ತತ್‌ಕ್ಷಣ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಬಂದು ಕಳೆದ ಮೂರ್ನಾಲ್ಕು ತಿಂಗಳಿನಿಂದ ಕ್ರಮ ತೆಗೆದು ಕೊಳ್ಳದೆಯೆ, ಒಂದು ರೀತಿ ಅವರಿಗೆ ಪರೋಕ್ಷವಾಗಿ ರಕ್ಷಣೆ ಕೊಟ್ಟುಕೊಂಡು ಕುಳಿತಿರುವಂಥದ್ದು, ರಸ್ತೆಯಲ್ಲಿ ಒಂದು ರೀತಿ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡುವುದು, ಬೀದಿಯಲ್ಲಿ ರಂಪಾ ಮಾಡುವುದು, ವಿಧಾನಸೌಧದಲ್ಲಿ ಬಂದು ಹೊಂದಾಣಿಕೆ ಮಾಡಿಕೊಳ್ಳುವುದು ಎನ್ನುವಂಥ ಆರೋಪಕ್ಕೆ ನೀವು ಗುರಿಯಾಗುತ್ತಿರುವಂಥದ್ದು ಸರ್ವಸಮ್ಮತ ಯಾವುದೇ ಕಾರಣಕ್ಕೂ ನಿಮಗೆ ಶೋಭೆ ತರುವಂಥದ್ದಲ್ಲ. ತತ್‌ಕ್ಷಣ ಎಷ್ಟು, ನೀವೆ ಹೇಳಿದ ಪ್ರಕಾರ 33 ಸಾವಿರ ಎಕರೆ ಭೂ ಕಬಳಿಕೆಯಾಗಿದೆ ಎಂದ ಮೇಲೆ ಅದು ಎಷ್ಟು ನಿಮ್ಮ ವಶಕ್ಕೆ ತೆಗೆದು ಕೊಂಡಿದ್ದೀರ? ಉಳಿದುದನ್ನು ಏಕೆ ವಶಕ್ಕೆ ತೆಗೆದುಕೊಂಡಿಲ್ಲ? ಎಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬಂದಿದೆ? ಉಳಿದುದನ್ನು ಏಕೆ ಹರಾಜು ಮಾಡಲಿಲ್ಲ? ಏಕೆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಂತೆ ಕೇಸನ್ನು ಹಾಕ ಲಿಲ್ಲ? ಈ ರೀತಿ ಯಾವ ದಾಖಲೆಗಳನ್ನು ತಿರುಚಿ ಕೋರ್ಟ್‌ನಲ್ಲಿ ಅವರ ಪರ ವಾಗಿ ತೀರ್ಮಾನ ತೆಗೆದುಕೊಳ್ಳಲು ಅವಕಾಶವಾಯಿತೋ ಅವರ ಮೇಲೇನು ಕ್ರಮ ತೆಗೆದುಕೊಂಡಿದ್ದೀರಾ? ಬೆಂಗಳೂರು-ಮೈಸೂರು ಕಾರಿಡಾರ್ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಈಗ ಇರುವಂಥ ಸುದ್ದಿ ಎಂದರೆ, ಇವತ್ತು ಒಂದು ರೀತಿ ಮುಖಭಂಗವಾಗಿದೆ. ನೀವೇ ಅಧಿಕಾರದಲ್ಲಿದ್ದಾಗ ಎಲ್ಲಾ ರೀತಿಯ ಹೊಂದಾಣಿಕೆ ಮಾಡಿ ಅಗ್ರಿಮೆಂಟ್‌ನ್ನು ಮಾಡಿಕೊಂಡು ಈಗ ರಸ್ತೆಯಲ್ಲಿ ಕೂಗಿ ಇವತ್ತು ಕೋರ್ಟ್‌ಗಳಿಂದ ಛೀಮಾರಿ ಹಾಕಿಸಿಕೊಳ್ಳುವಂಥ ಪರಿಸ್ಥಿತಿ ಬಂತು. ಆದರೆ ಈ ರೀತಿ ಬೇಜವಾಬ್ದಾರಿತನದ ನಡವಳಿಕೆಯಿಂದ ರಾಜ್ಯದ ಜನ ಇವತ್ತು ನಿಮ್ಮ ಬಗ್ಗೆ ನಂಬಿಕೆ ಮತ್ತು ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಸ್ಪಷ್ಟ ವಾದ ಉತ್ತರ ಕೊಡಿ, ಇಲ್ಲದಿದ್ದರೆ ಅಧಿಕಾರ ಬಿಟ್ಟು ತೊಲಗಿ. ನೀವು ಅಧಿಕಾರ ದಲ್ಲಿ ಮುಂದುವರೆಯಲು ನೈತಿಕವಾದ ಹಕ್ಕಿಲ್ಲ ಎನ್ನುವಂಥ ಮಾತನ್ನು ಹೇಳಿ ಉಳಿದಂಥ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ನನ್ನ ಸ್ನೇಹಿತರು ಮಾತನಾಡಲು ಅವಕಾಶ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಎರಡೇ ಎರಡು ನಿಮಿಷ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ಎರಡೇ ಎರಡು ನಿಮಿಷ ತಾವು ಕೊಡಬೇಕು. ದಯಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಪ್ರಿಲಿಮಿನರಿ ಬ್ರಿಫಿಂಗ್‌ನ್ನು ಎಳೆಯುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಎರಡೇ ಎರಡು ನಿಮಿಷದಲ್ಲಿ ಇದೇನು ಎಂದು ಹೇಳುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಹೇಳಲು ಹೊರಟಿರುವುದು, ಇತ್ತೀಚೆಗೆ ಬೆಂಗಳೂರು ನಗರ ಪಾಲಿಕೆಯಲ್ಲಿದ್ದ ಪ್ರಾಪರ್ಟಿಗಳು ಖಾಸಗಿಯವರಿಗೆ ಸೇರಿದೆ. ನಾನು ಆಗಲೆ ಎರಡನ್ನು ಇಲ್ಲಿ ಹೇಳಿದೆ. ಬೆಂಗಳೂರು ನಗರದಲ್ಲಿ ನಡೆಸುತ್ತಿದ್ದ ಹಳೆಯ ಶಾಲೆಗಳು, ಬೆಂಗಳೂರಿನಲ್ಲಿದ್ದಂಥ ಸಾರ್ವಜನಿಕ ಪ್ರಾಪರ್ಟಿಗಳು ಬಹಳ ಖಾಸಗಿ ಜನರ ಕೈಯಲ್ಲಿ ಸಿಕ್ಕಿಹಾಕಿಕೊಂಡು ಅಲ್ಲೆಲ್ಲಾ ಶಾಪಿಂಗ್ ಕಾಂಪ್ಲೆಕ್ಸ್‌ಗಳು, ದೊಡ್ಡ ದೊಡ್ಡ ಕನ್‌ಸ್ಟ್ರಕ್ಷನ್ಸ್ ಬಂದಿದೆ. ಎಲ್ಲಾ ಕಡೆ ಅಗ್ರಿಮೆಂಟನ್ನು ವಯಲೇಟ್ ಮಾಡಿದ್ದಾರೆ. ಈ ಭೂ ಕಬಳಿಕೆ ಬೆಂಗಳೂರಿಗೆ ಒಂದು ಸ್ವರ್ಗವಾಗಿ ಬಿಟ್ಟಿದೆ. ನಾನು ನಿಮಗೆ ಹೇಳಿದೆ, ನಾನು ಈಗ ಪ್ರಸ್ತಾಪ ಮಾಡುತ್ತೇನೆ, ಕೆಂಪೇಗೌಡ ಮಹಾರಾಜ ಕಾಂಪ್ಲಕ್ಸ್ ಏನು ಬಿ.ವಿ.ಕೆ.ಐಯ್ಯಂಗಾರ್ ರಸ್ತೆಯಲ್ಲಿದೆ. ಅದರ ಬಗ್ಗೆ ನಾನು ಮಾತನಾಡಲು ಅವಕಾಶ ಕೇಳುತ್ತಿದ್ದೇನೆ, ಮತ್ತೆ ಮೆಗರ್ತ್ ರಸ್ತೆಯಲ್ಲಿ 1 ಲಕ್ಷದ 56 ಸಾವಿರ ಚದರ ಅಡಿ ಜಮೀನನ್ನೇನು ಇಲ್ಲೀಗಲ್ ಆಗಿ ಪೊಜಿಷನ್‌ನಲ್ಲಿದ್ದಾರೆ ಅದರ ಬಗ್ಗೆ ಮಾತನಾಡಬೇಕಾಗಿದೆ, ಮಹಾವೀರ ಗಾರ್ಡನ್‌ನ 120 ಫ್ಲಾಟ್ಸ್‌ನ್ನೇನು ಕಟ್ಟಿದ್ದಾರೆ ಅದರ ಬಗ್ಗೆ ಮಾತನಾಡಬೇಕಾಗಿದೆ. ಸ್ಕಂದಾ ಎನ್‌ಕ್ಲೇವಲ್ಲೇನಾಗಿದೆ ಅದರ ಬಗ್ಗೆ ಮಾತನಾಡಬೇಕಾಗಿದೆ, ವಾರ್ಡ್ ನಂಬರ್ 28 ಚಿಕ್ಕಪೇಟೆಯಲ್ಲೇನಾಗಿದೆ ಇದರ ಬಗ್ಗೆ ಮಾತನಾಡಬೇಕಾಗಿದೆ. ನಾವು ಇದನ್ನು ತಮಗೆ ಸಂಪೂರ್ಣವಾಗಿ ಚರ್ಚೆ ಮಾಡುವ ಕಾಲದಲ್ಲಿ ತಮಗೆ ಬಿಡಿಸಿ ಹೇಳುತ್ತೇವೆ, ಇಲ್ಲ ಹೇಳು ಎಂದರೆ, ಈಗಲೆ ತಾವು ಅಲೋ ಮಾಡಿದರೆ ಈಗಲೂ ನಾವು ಮಾತನಾಡುತ್ತೇವೆ. ಇದೊಂದು ಬಹಳ ಪ್ರಾಮುಖ್ಯ ವಾದದ್ದು. ದಯಮಾಡಿ ಭೂ ಕಬಳಿಕೆ ಎಂದರೆ ಅದೇ ಜಾಗಕ್ಕೆ ಹೋಗುತ್ತೇವೆಂದು ತಾವು ಭಾವಿಸಬಾರದು. ಅದಲ್ಲದೆ ಬಹಳಷ್ಟು ಜಾಗ.

ಅಧ್ಯಕ್ಷರು : ಮತ್ತೆ ಮತ್ತೆ ಅದನ್ನೇ, ಅನೇಕ ಜ್ವಲಂತ ಸಮಸ್ಯೆಗಳು ರಾಜ್ಯದಲ್ಲಿ ಕಾಡುತ್ತಿವೆ. ಆದರೆ ಪ್ರತಿಯೊಂದರಲ್ಲೂ ಸಹ ಭೂ ಕಬಳಿಕೆ, ಭೂ ಕಬಳಿಕೆ ಎಂದು ಹೋಲಿಕೆ ಮಾಡಿಸುವುದರಲ್ಲೇನೇನೂ ಅರ್ಥವಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದೂ ಜ್ವಲಂತ ಸಮಸ್ಯೆ. ಒಂದು ಚದರ ಅಡಿಗೆ 23 ಸಾವಿರ ರೂಪಾಯಿ ಚಾರ್ಜ್ ಮಾಡುತ್ತಿದ್ದಾರೆ, ಬಿ.ವಿ.ಕೆ. ಐಯ್ಯಂಗಾರ್ ರೋಡ್‌ನ ಶಾಂಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಅಡಿಗೆ 23 ಸಾವಿರ ರೂಪಾಯಿ ಜಾಗವನ್ನು ಕಾಂಟ್ರ್ಯಾಕ್ಟ್ ಕೊಟ್ಟಿರುವುದನ್ನು ಇಲ್ಲಿ ಚರ್ಚೆ ಮಾಡಬಾರದೆ?

ದಯವಮಾಡಿ ನಮಗೆ ಚರ್ಚೆಗೆ ಅಲೊ ಮಾಡಬೇಕು. ಇದು ಬಹಳ ಜ್ವಲಂತವಾದ ಸಮಸ್ಯೆ. ಈ ರಾಜ್ಯದ ಬೊಕ್ಕಸಕ್ಕೆ ಯಥೇಚ್ಛವಾಗಿ ಬರಬೇಕಾದ ಹಣ ಲೂಟಿಯಾಗುತ್ತಿದೆ. ನಾವು ನಿಮಗೆ ಗೌರವನ್ನು ಇಟ್ಟುಕೊಂಡಿದ್ದೇವೆ. ಈ ರಾಜ್ಯದಲ್ಲೇನಾದರು ಇಂಥದನ್ನೆಲ್ಲ ಉಳಿಸಲು ನೀವು ನಮಗೆ ಸಹಾಯ ಮಾಡುತ್ತೀರಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಎಂದು, ಈ ನಿಲುವಳಿ ಸೂಚನೆಯನ್ನು ಅಲೋ ಮಾಡಿ ನಮಗೆ ಡೀಟೇಲ್ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪ್ರಪ್ರಥಮವಾಗಿ ನಾನು ಮಾನ್ಯ ಪ್ರಕಾಶ್‌ರವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಇದನ್ನು ಪ್ರಪ್ರಥಮವಾಗಿ ಅವರೇ ಹೇಳಿದರು, ರಾಜ್ಯದ ಜನತೆಯ ಗಮನಕ್ಕೆ ತಂದವರು ತಾವೇ. ಇಷ್ಟು ಸಾವಿರ ಎಕರೆ ಪ್ರದೇಶ ಭೂ ಕಬಳಿಕೆಯಾಗಿದೆ ಇದರಿಂದ ಸಾವಿರಾರು ಕೋಟಿ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿದೆ. ಇದರಲ್ಲಿ ಅನೇಕ ಜನ ಎಲ್ಲಾ ಪಕ್ಷದ ರಾಜಕಾರಣಿಗಳು ಸೇರಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ತಾವು ಹೇಳಿದ್ದೀರಿ, ಪತ್ರಿಕೆಯಲ್ಲಿ ಬಂದಿದೆ. ಕೆಲವು ಕಡೆ ನೀವು ಹರಾಜನ್ನೂ ಹಾಕಿದ್ದೀರಿ. ಒಂದೊಂದು ಎಕರೆ ಹರಾಜು ಹಾಕಿದಾಗ ಒಂದೂವರೆ ಕೋಟಿ ಬಂದಿದೆ. ನನ್ನ ಪ್ರಕಾರ ಕನಿಷ್ಠ ಎರಡು ಲಕ್ಷ ಸಾವಿರ ಕೋಟಿ ರೂಪಾಯಿ ಈ ಭೂ ಹಗರಣ ನಡೆಯುತ್ತಿದೆ. ಬೆಂಗಳೂರು ಒಂದರಲ್ಲೆ ನಾನಾ ದಿಕ್ಕಿನಲ್ಲಿ ಯಾವ್ಯಾವ ರೀತಿಯಲ್ಲಿ ತೆಗೆದುಕೊಂಡಿದ್ದಾರೆಂದರೆ ಖಾಸಗಿ ಗೃಹ ನಿರ್ಮಾಣ ಸಂಘದವರು, ಐ.ಟಿ.ಪಾರ್ಕ್‌ನವರು, ವಿದ್ಯಾ ಸಂಸ್ಥೆಗಳ ಹೆಸರಿನಲ್ಲಿ, ಧಾರ್ಮಿಕರ ಹೆಸರಿನಲ್ಲಿ ಮತ್ತು ಸ್ವಂತ ಹೆಸರಿನಲ್ಲಿ ಈ ರೀತಿ ನಾನಾ ರೀತಿಯ ಹೆಸರಿನಲ್ಲಿ ಪಡೆದಿರತಕ್ಕದ್ದು ಬೆಂಗಳೂರು ನಗರ ಒಂದರಲ್ಲೇ ಸುಮಾರು ಎರಡು ಲಕ್ಷ ಸಾವಿರ ಕೋಟಿ ರೂಪಾಯಿ ಅಂದಾಜಾಗುತ್ತದೆ. ತಾವು ನಿಜ, ಇದರ ಬಗ್ಗೆ ಬೆಳಕು ಚೆಲ್ಲಿದಿರಿ, ಮತ್ತು ನಿಮ್ಮ ಪಕ್ಷದ ಹಿರಿಯ ನಾಯಕರು ಹೇಳಿದರು, ಇದು ಭೂ ಕಬಳಿಕೆ ಬಹಳ ಆಗಿಹೋಗಿದೆ. 45 ಸಾವಿರ ಎಕರೆ, ಅವರ ಪ್ರಕಾರ 45 ಸಾವಿರ, ತಮ್ಮ ಪ್ರಕಾರ 35 ಸಾವಿರ ಎಕರೆ, ಅಂದರೆ ಹೆಚ್ಚು ಕಡಿಮೆ ಇಬ್ಬರ ಮಾತು ನೋಡಿದಾಗ ಭೂ ಕಬಳಿಕೆ ಆಗಿರುವಂಥದ್ದು ಸತ್ಯ. ಅಂದಮೇಲೆ ನಾನು ತಮಗೆ ನೇರವಾಗಿ ಹೇಳುತ್ತೇನೆ. ಇದನ್ನು ಏಕೆ ತಾವು ಮುಚ್ಚಿಡುತ್ತಿದ್ದೀರಿ? ಇಲ್ಲಿ ತೆಗೆದುಕೊಂಡು ಬನ್ನಿ, ಶ್ವೇತಪತ್ರ ಮಂಡಿಸಿ ಈ ಸದನದಲ್ಲಿ ಯಾರ್ಯಾರ ಹೆಸರಿನಲ್ಲಿ ಭೂ ಕಬಳಿಕೆಯಾಗಿದೆ? ಯಾರ್ಯಾರು ರಾಜಕಾರಣಿಗಳು? ಯಾರ್ಯಾರು ಶ್ರೀಮಂತರು? ಎಲ್ಲೆಲ್ಲಿ ಪಡೆದಿದ್ದಾರೆ? ಪ್ರತಿಯೊಂದನ್ನೂ ನೀವು ಇಲ್ಲಿ ಒಂದು ರೀತಿ ರಾಮರಾಜ್ಯದ ರೀತಿ ಅಗ್ನಿಪರೀಕ್ಷೆಯಾಗಲಿ, ನಡೆದುಹೋಗಲಿ ಇಲ್ಲಿ, ನಾನು

ನಿಮ್ಮನ್ನು ಮೊದಲೇ ಅಭಿನಂದಿಸಿದ್ದೇನೆ. ಇದನ್ನು ನೀವೇ ಈ ವಿಚಾರವನ್ನು ಬಯಲು ಮಾಡಿದವರು. ಈ ವಿಚಾರವನ್ನು ಹೊರಕ್ಕೆ ತಂದಂಥವರು ನೀವು. ಇಂಥ ಸಂದರ್ಭದಲ್ಲಿ ಏನು ನಾವು ನಿಲುವಳಿ ಸೂಚನೆ ತಂದಿದ್ದೇವೆ. ಇದು ನಿಲುವಳಿ ಸೂಚನೆಗೆ ಯೋಗ್ಯವಾಗಿದೆ, ಬಹಳ ಯೋಗ್ಯವಾಗಿದೆ. ಕಾರಣ ತಾವೇ ಇದನ್ನು ಸ್ವತಃ ಇಲ್ಲಿ ಒಂದು ಹೇಳಿಕೆ ಮಾಡಬಹುದಿತ್ತು. ನೀವು ಹೊರಗಡೆ ಅನೇಕ ಕಡೆ ಮಾಡಿದ್ದೀರಿ. ತಾವು ಹೋದ ಕಡೆಯಲ್ಲಾ ಪತ್ರಿಕಾ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದೀರಿ, ನಾನು ಮೆಚ್ಚುತ್ತೇನೆ. ನಿಮ್ಮ ದಕ್ಷತೆಗೆ, ನಿಮ್ಮ ಮಾತಿಗೆ ಮೆಚ್ಚುತ್ತೇನೆ. ಅಂದಮೇಲೆ ಈ ಸದನ ಬಹಳ ಅತ್ಯಂತ ಜವಾಬ್ದಾರಿಯುತವಾದಂಥ ಪ್ರಜಾತಂತ್ರ ವ್ಯವಸ್ಥೆ ರೀತಿ ಈ ಸದನದಲ್ಲಿ ತಾವು ಇವತ್ತು ಇಷ್ಟರೊಳಗೆ ಮಂಡಿಸಬೇಕಾಗಿತ್ತು. ಮಂಡಿಸಿದ್ದರೆ ನಿಮಗೆ ಬಹಳ ಶಹಬಾಸ್‌ಗಿರಿಯನ್ನು ಕೊಡುತ್ತಿದ್ದೆ. ಹೇಳಿ, ಯಾರ್ಯಾರು ಬಯಲಾಗಿ ಹೋಗಲಿ, ಅವರದ್ದೆಲ್ಲಾ ಹೊರಗಡೆ ಬರಲಿ, ಎಂಥ ದೊಡ್ಡ ರಾಜಕಾರಣಿ ಇರಬಹುದು, ದೊಡ್ಡ ವ್ಯಕ್ತಿ ಇರಬಹುದು, ಯಾವುದೆ ಪ್ರಮಾಣದ್ದು ಇರಬಹುದು, ಅವರದ್ದೆಲ್ಲಾ ಬಯಲಿಗೆ ಬಂದರೆ ನಿಜಕ್ಕೂ ಈ ರಾಜ್ಯದಲ್ಲಿ ಒಂದು ಹೊಸ ಅಧ್ಯಾಯ ಆರಂಭವಾಗುತ್ತದೆ ಮತ್ತು ಅದನ್ನು ಬಿಡಿಸಿಕೊಳ್ಳಲು ಏನು ವ್ಯವಸ್ಥೆ ಮಾಡಬೇಕು, ಯಾರ್ಯಾರು ಹಿಡಿದುಕೊಂಡಿದ್ದಾರೆ ಅವರ ಹತ್ತಿರ ಏನೇನು ವಸೂಲಿ ಮಾಡುವುದಕ್ಕೆ ಅದನ್ನು ಬಿಡಿಸಿಕೊಳ್ಳಲು ಏನೇನು ವ್ಯವಸ್ಥೆಯಾಗಬೇಕು, ಇದಕ್ಕೆ ಸಮಗ್ರವಾದಂಥ ಸಿ.ಬಿ.ಐ. ಆಗಬೇಕೋ ಅಥವಾ ಬೇರೆ ಯಾವ ರೀತಿ ಆಗಬೇಕು ಎಂದು ಯೋಚನೆ ಮಾಡುವುದಕ್ಕೆ ತಾವು ದಯವಿಟ್ಟು ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳಬೇಕು. ಸುಮ್ಮನೆ 69ರ ಅಡಿಯಲ್ಲಿ ಚರ್ಚೆ ಇದೆ, ಅದಕ್ಕೆ ಶಕ್ತಿ ಬರುವುದಿಲ್ಲ. ನಿಲುವಳಿ ಸೂಚನೆ ಎಂದರೆ ಇದಕ್ಕೆ ನಿಜವಾಗಲು ಬಹಳ ಖಾತುರ ಇದೆ, ಆತುರವಿದೆ, ತಕ್ಷಣ ಇರತಕ್ಕ ವ್ಯವಸ್ಥೆ ಇದಾದ್ದರಿಂದ ನಿಲುವಳಿ ಸೂಚನೆಯಾಗಿ ಇದನ್ನು ಮಾರ್ಪಾಡು ಮಾಡಬೇಕು. ಮಾಧುಸ್ವಾಮಿಯವರು ಹೇಳಿದ್ದರಲ್ಲಿ ಒಂದು ಅರ್ಥವಿದೆ. ಬೆಂಗಳೂರು ನಗರದಲ್ಲಿ ಮಾಧುಸ್ವಾಮಿಯವರೇನು ಒಂದು ಲಿಸ್ಟ್ ಮಾಡಿದರು, ಪಟ್ಟಿ ಮಾಡಿದ್ದಾರೆ ನೂರಾರು, ಮಹಾರಾಜ ಕಟ್ಟಡ ಇವತ್ತು ನಾನು ಹೇಳುತ್ತೇನೆ, ಯಾರದ್ದೋ ಇದೇನು ಹುಡುಗಾಟವೆ? ಅದು ಒಂದಕ್ಕೇ ಇವತ್ತು ಆಗುತ್ತದೆ ನೂರಾರು ಕೋಟಿ ರೂಪಾಯಿ. ಇದೇನು ಪರಿಸ್ಥಿತಿ? ಈ ತರ ಲೂಟಿ, ಹಗಲು ದರೋಡೆ ನಡೆದುಹೋಗಿದೆ. ಮತ್ತು ಖಾಸಗಿ ಗೃಹ ನಿರ್ಮಾಣ ಸಂಘದವರು ಬೆಂಗಳೂರನ್ನು ನಾಶ ಮಾಡಿ ಇಟ್ಟಿದ್ದಾರೆ. ಇದೆಲ್ಲವನ್ನು ಸಮಗ್ರವಾಗಿ ಚರ್ಚೆ ಆಗಬೇಕಾಗಿದೆ. ಆದ್ದರಿಂದ ದಯಮಾಡಿ ತಾವು ನಿಲುವಳಿ ಸೂಚನೆಗೆ ಅವಕಾಶ

ಮಾಡಿಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ರಾಜ್‌ಕುಮಾರ್ ಎಸ್ಟೇಟ್ ಎದುರುಗಡೆ ಶೇಷಗನಹಳ್ಳಿ ಎನ್ನುವಂಥ ಗ್ರಾಮ, ಸರ್ವೆ ನಂಬರ್ 77ರಲ್ಲಿ 99 ಎಕರೆ ಸರ್ಕಾರದ ಭೂಮಿ ಒತ್ತುವರಿಯಾಗಿ ಕಾಂಪೌಂಡ್ ಹಾಕಿಕೊಂಡಿದ್ದಾರೆ. ರಾಜ್‌ಕುಮಾರ್ ಎಸ್ಟೇಟ್‌ಗೂ ಇದಕ್ಕೂ ಏನೂ ಸಂಬಂಧವಿಲ್ಲ. ನಾನು ಹೇಳಿದ್ದು ಬಹಳ ಸ್ಪಷ್ಟವಾಗಿ ಶೇಷಗನಹಳ್ಳಿ, ಸರ್ವೆ ನಂಬರ್ 77ರಲ್ಲಿ 99 ಎಕರೆಗೆ ಭೂ ಕಬಳಿಕೆಯಾಗಿದೆ. ಬೇಲಿ ಹಾಕಿಕೊಂಡಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರಿ ಸ್ವಾಮ್ಯದ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದ ನೌಕರರ ಸಂಘದ ವಸತಿ ಸಮುಚ್ಚಯಕ್ಕೆ ಸೇರಿದ 80 ಕೋಟಿ ಬೆಲೆ ಬಾಳುವಂಥ ಜಾಗವನ್ನು ಭೂಗಳ್ಳರು ಲಪಟಾಯಿಸಿಕೊಂಡು ಎಂ.ಎಸ್.ಯುನೈಟೆಡ್ ಎಂಬ ಖಾಸಗಿ ಸಂಸ್ಥೆ ಆ ಜಾಗಕ್ಕೆ ನ್ಯಾಯಾಲಯದಿಂದ ತಡೆಯಾಜ್ಞೆ ಸಹ ತಂದಿದೆ. ಈ ರೀತಿ ಅನೇಕ, ನನಗೇನೆಂದರೆ ಒಂದು ನೂರು ಭೂ ಕಬಳಿಕೆಯ ವಿವರಗಳು ನನ್ನ ಹತ್ತಿರ ಇದೆ. ಎಂ.ಪಿ.ಪ್ರಕಾಶ್‌ರವರು, ಕಂದಾಯ ಸಚಿವರಿಗೆ ಅಲಾಯಿದ ಕಳಿಸುವುದು ಬೇರೆ. ಅದರ ದಾಖಲೆಗಳು ಇಲ್ಲಿ ಬರುವ ದೃಷ್ಟಿಯಿಂದ ಇಲ್ಲಿ ವಿವರವಾದ ಚರ್ಚೆಗೆ ಅವಕಾಶ ಕೊಟ್ಟರೆ ಇವತ್ತು ದೇವೆಗೌಡರು, ಎಂ.ಪಿ.ಪ್ರಕಾಶ್‌ರವರು ಏನು ಕೆಲವು ವಿಷಯಗಳನ್ನು ಬಹಿರಂಗ ಮಾಡಿದ್ದಾರೆ. ಇನ್ನೂ ಅನೇಕ ಮಹತ್ವವಾದ ದಾಖಲೆಗಳು ಇದ್ದಾವೆ. ಅದು ರೆಕಾರ್ಡ್‌ಗೆ ಹೋಗಬೇಕು, ಸಾರ್ವಜನಿಕರಿಗೆ ಗೊತ್ತಾಗಬೇಕು.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ.....

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರು ಮಂಡನೆ ಮಾಡಿರುವಂತಹ ನಿಲುವಳಿ ಸೂಚನೆಯನ್ನು ನಾನು ತಳ್ಳಿ ಹಾಕುತ್ತಾ, ನಿಮಯ 69ರ ಅಡಿಯಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಆರ್.ಅಶೋಕ್ :- ಮಾನ್ಯ ಅಧ್ಯಕ್ಷರೆ, ...

(ಗೊಂದಲ)

ಅಧ್ಯಕ್ಷರು :- ನಾನು ಈಗಾಗಲೇ ಮೂರು ಜನರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಅವರೂ ಸಿಗ್ನೇಚರ್ ಮಾಡಿದ್ದಾರೆ ಸಾರ್.

(ಗೊಂದಲ)

ಅಧ್ಯಕ್ಷರು :- ಎಲ್ಲರಿಗೂ ಕೊಡಬೇಕೆಂದೇನೂ ಇಲ್ಲ. ಸಾಮಾನ್ಯವಾಗಿ

ಅಂತಹ ಸಂದರ್ಭಗಳಲ್ಲಿ ಮೂರು ಜನರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ನಿಯಮಾವಳಿಗಳಲ್ಲಿದೆ. ಅದರಂತೆ ಅವಕಾಶ ಕೊಟ್ಟಿದ್ದೇನೆ. ನಿಯಮ 69ರ ಅಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಆಗ ನೀವು ಮಾತನಾಡಬಹುದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ದಯವಿಟ್ಟು ಅವರಿಗೆ preliminary submission ಮಾಡಲು ಐದು ನಿಮಿಷ ಅವರಿಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು :– ನಿಮಯ 69ರ ಅಡಿಯಲ್ಲಿ ಚರ್ಚೆ ಮಾಡಲು ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನಲ್ಲಾ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ..... ಅವರೂ ಸಿಗ್ನೇಚರ್ ಮಾಡಿದ್ದಾರೆ. ದಯವಿಟ್ಟು ಐದು ನಿಮಿಷ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೆ, ನನಗೂ ಗೊತ್ತಿದೆ. ಸಾಮಾನ್ಯವಾಗಿ ನಿಲುವಳಿ ಸೂಚನೆ ಬಂದಾಗ, ಅದರ ಮೇಲೆ ಮಾತನಾಡಲು ಮೂರು ಜನರಿಗೆ ಅವಕಾಶ ಕೊಡಬೇಕೆಂದು ನಿಯಮಾವಳಿಗಳಲ್ಲಿದೆ. ಆ ಪ್ರಕಾರ ಮೂರು ಜನ ಹಿರಿಯ ಮುಖಂಡರುಗಳಾದ ನೀವು ಮಾತನಾಡಿದ್ದೀರಿ. ನೀವೆಲ್ಲಾ ನಿಯಮ 69ರ ಅಡಿಯಲ್ಲಿ ಇದರ ಮೇಲೆ ಮಾತನಾಡುವಿರಂತೆ. ಈಗ ದಯಮಾಡಿ ಕುಳಿತುಕೊಳ್ಳಿ. ಮುಂದಕ್ಕೆ ಹೋಗೋಣ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ಐದೇ ಐದು ನಿಮಿಷ ಅವಕಾಶ ಕೊಡಿ ಸಾರ್.

ಅಧ್ಯಕ್ಷರು :– ನಿಯಮ 69ರ ಅಡಿಯಲ್ಲಿ ನಾನು ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಈ ವಿಚಾರದಲ್ಲಿ ರೂಲಿಂಗ್ ಅನ್ನು ಕೊಟ್ಟಿದ್ದೀರಿ. ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಅನೇಕ ವಿಷಯಗಳನ್ನು ನಿಯಮ 60ರ ಕೆಳಗೆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಲು ತಮ್ಮನ್ನು ಒಪ್ಪಿಸಬೇಕೆಂಬ ಮಾತಿನ ಹಿನ್ನೆಲೆಯಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ಮಾಡಿದಂತಹ ಪ್ರಸ್ತಾಪದ ವಿಷಯದ ಬಗ್ಗೆ. ಅದನ್ನು ಅಲ್ಲಗಳೆಯತಕ್ಕಂಥ ಪ್ರಯತ್ನವನ್ನು ನಾವು

ಮಾಡುವುದಿಲ್ಲ. ಇದು ಅತ್ಯಂತ ಪ್ರಮುಖವಾಗಿರತಕ್ಕಂಥ ವಿಷಯ, ಭೂ ಕಬಳಿಕೆಯಾಗಿದೆ, ಇದರ ಬಗ್ಗೆ ಚರ್ಚೆಯಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಇದೆಲ್ಲವನ್ನೂ ಸಹ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲದಕ್ಕೂ ಕೂಡ ನಿಯಮಗಳಿವೆ. ತಾವು ನಮ್ಮ ಸಹಾಯಕ್ಕೂ ಕೂಡ ಬಂದಿದ್ದೀರಿ. 60ರಲ್ಲಿ ಇರತಕ್ಕಂಥದ್ದು ಸಂಪೂರ್ಣವಾದಂತದ್ದು. ಆದರೂ ಕೆಲವು ವಿಚಾರದ ಬಗ್ಗೆ ಅವರು ಹೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ನಾವೂ ಹೇಳಬೇಕಾಗುತ್ತದೆ.....

ಶ್ರೀ ಜೆ.ಸಿ.ಮಾಧುಸ್ವಾಮಿ :– Sir, I am on a point of Order. ತಾವು ರೂಲಿಂಗ್ ಕೊಟ್ಟಮೇಲೆ, ಮತ್ತೆ ಇವರೇನು ಹೇಳುತ್ತಾರೆ?

ಅಧ್ಯಕ್ಷರು :– ನಾನು ರೂಲಿಂಗ್ ಕೊಟ್ಟಿದ್ದೇನೆ. ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆ ಪ್ರಸ್ತಾಪಿಸುವುದನ್ನು ನಾನು ತಳ್ಳಿ ಹಾಕಿ, ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದೇನೆ. ಅಲ್ಲಿಗೆ ಈ ವಿಷಯ ಮುಕ್ತಾಯವಾಗಿದೆ. ನಾವು ಈಗ ಮುಂದಕ್ಕೆ ಹೋಗೋಣ.

(ಗೊಂದಲ)

ಅಧ್ಯಕ್ಷರು :– ದಯವಮಾಡಿ ಕುಳಿತುಕೊಳ್ಳಿ. ಈಗ ವಿತ್ತೀಯ ಕಾರ್ಯಕಲಾಪಗಳನ್ನು ಆರಂಭಿಸುತ್ತಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ :– ..... ಬಹಳ ಚಾರಿತ್ರಿಕವಾಗಿ .....

(ಗೊಂದಲ)

ಅಧ್ಯಕ್ಷರು :– ಮಾನ್ಯ ಪ್ರಕಾಶ್‌ರವರೆ, ನಾನು ಆ ವಿಷಯವನ್ನು ಮುಗಿಸಿ, ಮುಂದಕ್ಕೆ ಹೋಗುತ್ತಿದ್ದೇನೆ. ದಯಮಾಡಿ ಸಹಕರಿಸಿ. ನಿಯಮ 69ರ ಅಡಿಯಲ್ಲಿ ಅದನ್ನು ಕನ್‌ವರ್ಟ್ ಮಾಡಿದ್ದೇನೆ. ಆಗ ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :– ಈಗ ಅದರ ಬಗ್ಗೆ ಮಾತನಾಡಲು ನಾನು ಅವಕಾಶ ಕೊಡುವುದಿಲ್ಲ. I will fix up a time. ಆಗ ಮಾತನಾಡಿ, ಅದಕ್ಕೇನು? ನಾನು ಈಗಾಗಲೇ ರೂಲಿಂಗ್ ಅನ್ನು ಕೊಟ್ಟು ಬಿಟ್ಟಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಆಯಿತು ಸಾರ್, ಒಂದು ನಿಮಿಷ. ನಾವು ನಿಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಿಲ್ಲ. ಅದಕ್ಕೆ ನಾವು ಗೌರವ ಕೊಡುತ್ತೇವೆ. ನಿಲುವಳಿ ಸೂಚನೆಯನ್ನು ತಾವು ನಿಯಮ 69ಕ್ಕೆ ಕನ್ವರ್ಟ್ ಮಾಡಿ, ಅದಕ್ಕೆ ಸಮಯವನ್ನು ನಿಗದಿ ಮಾಡುತ್ತೇನೆ ಎಂದು ಹೇಳಿದ್ದೀರಿ. ಈ ಮನೆಯಲ್ಲಿ ಅತ್ಯಂತ ಮಹತ್ವವಾದಂತಹ ವಿಷಯಗಳು ಬಂದಾಗ, ನಿಲುವಳಿ ಸೂಚನೆ ಮಂಡನೆಗೆ ಮೂಲಕ ನೀವು ಅವಕಾಶವನ್ನು ಕೊಟ್ಟ ಮೇಲೆ, 69ರ

ಅಡಿಯಲ್ಲಿ ಅದನ್ನು ಬದಲಾವಣೆ ಮಾಡಿದ ಮೇಲೆ, ಚರ್ಚೆ ಮುಂದುವರೆದು, ದಿವಸಗಟ್ಟಲೆ ಚರ್ಚೆಯಾಗಿ ಅದಕ್ಕೆ ಪರಿಹಾರವನ್ನು ಹುಡುಕುವಂತಹ ಪ್ರಯತ್ನ ಮಾಡಿದ್ದೇವೆ. ಇಂತಹ ಸಂದರ್ಭದಲ್ಲಿ ಇಂತಹ ಮಹತ್ವವಾದಂತಹ ವಿಷಯಗಳನ್ನು ನಾವು ಚರ್ಚೆಗೆ ತೆಗೆದುಕೊಂಡಾಗ, 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಈಗಾಗಲೇ ಅದನ್ನು ಕನ್ವರ್ಟ್ ಮಾಡಿದ್ದೇನೆ. 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಈಗಾಗಲೇ ಇದನ್ನು ಮುಂದುವರೆಸಿಕೊಂಡು ಹೋಗಬಹುದಲ್ಲವೇ ಸಾರ್?

ಶ್ರೀ ವಾಟಾಳ್ ನಾಗರಾಜ್ :– .....ತಮ್ಮ ರೂಲಿಂಗ್ ನಾನು ಗೌರವ ಕೊಡುತ್ತೇನೆ. .....

ಅಧ್ಯಕ್ಷರು :– ನಾನು ಅವಕಾಶ ಕೊಡುತ್ತೇನೆ ಎಂದು ಹೇಳುತ್ತಿದ್ದೇನಲ್ಲಾ.

ಶ್ರೀ ವಾಟಾಳ್ ನಾಗರಾಜ್ :– ..... ಅದರ ಶಕ್ತಿಯೇ ಸತ್ತು ಹೋಗಿ ಬಿಟ್ಟಿದೆ.

ಅಧ್ಯಕ್ಷರು :– ಈಗ ನಾನು ಹೇಳುತ್ತೇನೆ ಕೇಳಿ. 69ರ ಅಡಿಯಲ್ಲಿ ಈಗಲೇ ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದೇ? ತಾವು ಸಿದ್ಧವಾಗಿದ್ದೀರಾ? I will fix up a time.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ತಾವು ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ರೂಲಿಂಗ್ ಕೊಟ್ಟಾಗಿದೆ. ತಾವು ಇದನ್ನು ಈ ನಿಮಿಷದಲ್ಲೇ ಚರ್ಚೆಗೆ ತೆಗೆದುಕೊಳ್ಳಿ ಅಥವಾ ನಂತರವಾದರೂ ತೆಗೆದುಕೊಳ್ಳಿ. ಅದಕ್ಕೆ ನಮ್ಮಿಂದ ಯಾವುದೇ ಆಕ್ಷೇಪಣೆ ಇಲ್ಲ. ಆದರೆ, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ನಾವು ಮಹತ್ವವನ್ನು ಕೊಡಬೇಕಾಗುತ್ತದೆ. ಅಜೆಂಡಾದಲ್ಲಿ ಇರತಕ್ಕಂಥ ಪ್ರಶ್ನೋತ್ತರ ಇತ್ಯಾದಿಗಳೇನಿವೆ; ಅವುಗಳನ್ನು ಮುಗಿಸಿದ ನಂತರ ತಾವು ಕಾಲ ನಿಗದಿ ಮಾಡಿ, ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ನಮ್ಮದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು :– ಈಗ ಹನ್ನೊಂದು ಕಾಲು ಗಂಟೆಯಾಗಿದೆ. ದಯಮಾಡಿ 12 ಗಂಟೆಯೊಳಗಾಗಿ ಇದರ ಚರ್ಚೆ ಮುಗಿಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆಗುವುದಿಲ್ಲ ಸಾರ್.

ಅಧ್ಯಕ್ಷರು :– ದಯಮಾಡಿ ಸಹಕರಿಸಬೇಕು. ಬೇರೆ ಬೇರೆ ಕಲಾಪಗಳೂ ಇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ಇದಕ್ಕೆ ಎರಡು ಗಂಟೆಗಳ ಕಾಲವಾದರೂ

ತಾವು ಅವಕಾಶ ಮಾಡಿಕೊಡಬೇಕು. ಬೇಕಾದರೆ ತಾವು ಇದನ್ನು ಸಾಯಂಕಾಲ ತೆಗೆದುಕೊಳ್ಳಿ. ಇದನ್ನು ಚರ್ಚಿಸಲು ನಮಗೆ ಸಮಯ ಬೇಕು.....

(ಗೊಂದಲ)

ಅಧ್ಯಕ್ಷರು :– ಆಯಿತು, ಹಾಗಾದರೆ ಇದರ ಬಗ್ಗೆ ಚರ್ಚೆ ಈಗ ಬೇಡ. ನಾನು ಮಧ್ಯಾಹ್ನ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ಆಯಿತು, ಮಧ್ಯಾಹ್ನವೇ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ಆಯಿತು. ಮಾನ್ಯ ಅಶೋಕ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಮಧ್ಯಾಹ್ನ ಇದನ್ನು ತೆಗೆದುಕೊಳ್ಳೋಣ. ಅದಕ್ಕೆ ನಾನು ಟೈಮ್ ಫಿಕ್ಸ್ ಮಾಡುತ್ತೇನೆ. ಈಗ ವಿತ್ತೀಯ ಕಾರ್ಯಕಲಾಪಗಳು. ಮಾನ್ಯ ಹೆಚ್.ಡಿ.ಬಸವರಾಜ್ ಮತ್ತು ಮಾನ್ಯ ಸಿ.ಟಿ.ರವಿಯವರು ಕಾಣುತ್ತಿಲ್ಲ. ಮಾನ್ಯ ಯೋಗೀಶ್‌ಭಟ್‌ರವರು ಈಗ ಮಾತನಾಡಿ. ದಯವಿಟ್ಟು 10 ನಿಮಿಷಗಳಲ್ಲಿ ಮುಗಿಸಬೇಕು. ಬಹಳ ಜನ ಮಾತನಾಡಲು ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೆ. ಎಲ್ಲರೂ 20–25 ನಿಮಿಷಗಳನ್ನು ತೆಗೆದುಕೊಂಡರೆ, ನಾನು ಎಲ್ಲರಿಗೂ ಅವಕಾಶ ಕೊಡುವುದಿಲ್ಲ. 10 ನಿಮಿಷಗಳಲ್ಲಿ ಮುಗಿಸಬೇಕು. ಮೊದಲಿಗೆ ಎಂಟು ನಿಮಿಷಗಳು, ನಂತರ ಎರಡು ನಿಮಿಷಗಳು, ಒಟ್ಟಿನಲ್ಲಿ 10 ನಿಮಿಷಗಳಲ್ಲೇ ಮುಗಿಸಬೇಕು.

ಶ್ರೀ ಎನ್.ಯೋಗೀಶ್ ಭಟ್ :– ಸನ್ಮಾನ್ಯ ಅಧ್ಯಕ್ಷರೆ, ನಾನು .....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಪ್ರಶ್ನೋತ್ತರವನ್ನು ತೀರಾ ಇಷ್ಟೊಂದು ಕಡೆಗಣಿಸತಕ್ಕದ್ದು ಒಳ್ಳೆಯದಲ್ಲ.

ಅಧ್ಯಕ್ಷರು :– ಅದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ :– ಸಾರ್, ಪ್ರಶ್ನೋತ್ತರ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು :– ನೋಡಿ ಸ್ವಾಮಿ ವಾಟಾಳ್ ನಾಗರಾಜ್‌ರವರೆ, ಇದು ಮೊದಲು ಚರ್ಚೆಯಾಗಲಿ. ಆಮೇಲೆ ಉತ್ತರಕ್ಕಿಂತ ಮೊದಲು ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ... ಬೇರೆ ಸಂದರ್ಭ ಇದ್ದರೆ ಒಂದು ತರಹ. ಈಗ ಅಂತಹ ವಿಶೇಷ ಏನೂ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ಬೇರೆ ಸಮಯದಲ್ಲಾದರೆ ಪ್ರಶ್ನೋತ್ತರವನ್ನು ಮುಂದೂಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ.

ಅಧ್ಯಕ್ಷರು :– ಪ್ರಶ್ನೋತ್ತರವನ್ನು ನಿನ್ನೆಯೂ ತೆಗೆದುಕೊಂಡು ಮುಗಿಸಿದ್ದೇವೆ. ಇವತ್ತು ಅದನ್ನು ತೆಗೆದುಕೊಳ್ಳೋಣ. ದಯಮಾಡಿ ಸಹಕರಿಸಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :- ನಿಲುವಳಿ ಸೂಚನೆಯನ್ನು ನಿಯಮ 69ರ ಅಡಿಯಲ್ಲಿನ ಚರ್ಚೆಗೆ ಪರಿವರ್ತಿಸಿ ಟೈಮ್ ಫಿಕ್ಸ್ ಮಾಡುತ್ತೇನೆ ಎಂದು ಹೇಳಿದ್ದೀರಿ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ನಂತರ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ಸಾರ್, ಪ್ರಶ್ನೋತ್ತರ ಬಹಳ ಪ್ರಾಮುಖ್ಯವಾದುದು. ದಯಮಾಡಿ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು :- ಈಗ ವಿತ್ತೀಯ ಕಾರ್ಯಕಲಾಪಗಳು. ದಯಮಾಡಿ ಸಹಕರಿಸಿ. ವಿತ್ತೀಯ ಕಲಾಪಗಳೂ ಸಹ ಅಷ್ಟೇ ಮುಖ್ಯ.

ಶ್ರೀ ಬಿ.ನಾಗರಾಜ ಶೆಟ್ಟಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಯೋಗೀಶ್ ಭಟ್‌ರವರು ಬೇಡಿಕೆಗಳ ಮೇಲೆ ಮಾತನಾಡಲು ನಿಂತಿದ್ದಾರೆ. ಆದರೆ ಇಲ್ಲಿ ಯಾರೂ ಮಂತ್ರಿಗಳೇ ಇಲ್ಲ. ಸ್ವಲ್ಪ ಹೇಳಿ.

ಅಧ್ಯಕ್ಷರು :- ಆಯಿತು, ಅವರನ್ನು ಕರೆಸೋಣ. ಮಾನ್ಯ ಸಿಂಧ್ಯಾರವರು ಬಂದಿದ್ದಾರೆ. ಮಾನ್ಯ Social Welfare Minister ಕೂಡ ಇದ್ದಾರೆ. ಚೀಫ್ ವಿಪ್‌ರವರ, ಮಂಡಿಸಲ್ಪಟ್ಟ ಬೇಡಿಕೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಯಾರ್ಯಾರು ಇದ್ದಾರೋ, ಅವರೆಲ್ಲರನ್ನು ಸದನಕ್ಕೆ ಕರೆಸಿ.

ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಎನ್.ಯೋಗೀಶ್ ಭಟ್ :- ಮಾನ್ಯ ಅಧ್ಯಕ್ಷರೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಬೇಡಿಕೆ ಮೇಲೆ ನಾನು ಮಾತನಾಡುತ್ತೇನೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆ ಅದರಲ್ಲೂ ವಿಶೇಷವಾಗಿ ಮಂಗಳೂರು ಕರ್ನಾಟಕ ರಾಜ್ಯದ ಆರ್ಥಿಕ ರಾಜಧಾನಿಯನ್ನಾಗಿ ಮಾಡಬೇಕೆಂಬ ಆಸೆ ನಮ್ಮದಾಗಿದೆ. ಯಾವ ರೀತಿಯಲ್ಲಿ ಬೊಂಬಾಯಿ ಮಹಾರಾಷ್ಟ್ರ ರಾಜ್ಯದ ಆರ್ಥಿಕ ರಾಜಧಾನಿಯಾಗಿ ಗುರುತಿಸಲ್ಪಡುತ್ತದೋ, ಅದೇ ರೀತಿಯಲ್ಲಿ ಇರುವಂತಹ potentiality, ಅದೇ ರೀತಿಯಲ್ಲಿ ಇರುವಂತಹ ಯೋಗ್ಯತೆಗಳು ನಮ್ಮಲ್ಲೂ ಇದೆ. ಒಂದು ಕಡೆಯಲ್ಲಿ ಬಂದರು, ಮತ್ತೊಂದು ಕಡೆಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗುವಂತಹ ಹಂತ, ರೈಲ್ವೆ ಇತ್ಯಾದಿ ಬೇರೆ ಬೇರೆ ರೀತಿಯಲ್ಲಿ ಇಲ್ಲಿ ವ್ಯವಸ್ಥೆಗಳು ಇರುವುದರಿಂದ ಖಂಡಿತವಾಗಿಯೂ ಇದಕ್ಕೆ ನಮ್ಮ ಕರ್ನಾಟಕ